# ಯೋರ್ದನ್ ನದಿಯ ರಹಸ್ಯ

## ಅಧ್ಯಯನ # 16




## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 16

# ಯೋರ್ದನ್ ನದಿಯ ರಹಸ್ಯ

**<u>ದಯವಿಟ್ಟು ಗಮನಿಸಿ:</u> ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.**

*ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.*

ಈ ದಿನದ ಅಭ್ಯಾಸದ ವಿಷಯ **ಯೋರ್ದನ್ ನದಿ.**

ಇದು ಇಸ್ರಾಯೇಲಿನ ಉದ್ದಕ್ಕೂ ಹರಿಯುವ ಏಕೈಕ ನದಿಯಾಗಿದೆ. ಸತ್ಯವೇದದಲ್ಲಿ ಇದೊಂದು ಬಹಳ **ವಿಶೇಷವಾದ ನದಿಯಾಗಿದೆ!**

ಈ ನದಿಯನ್ನು ಕುರಿತು **ಆಗಾಗ್ಗೆ** ಪ್ರಸ್ತಾಪಿಸರುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**2 ಅರಸರುಗಳು 5:10**

**"ಎಲೀಷನು ಅವನಿಗೆ - ಹೋಗಿ ಯೋರ್ದನ್ ಹೊಳೆಯಲ್ಲಿ ಏಳು ಸಾರಿ ಸ್ನಾನ ಮಾಡು; ಆಗ ನಿನ್ನ ದೇಹವು ಮುಂಚಿನಂತಾಗುವುದು; ನೀನು ಶುದ್ಧನಾಗುವಿ ಎಂದು ಹೇಳಿಕಳುಹಿಸಿದನು."**



ಇಲ್ಲಿ **ಸಿರಿಯ ದೇಶದವನಾದ ನಾಮಾನನನ್ನು** ಕುಷ್ಠರೋಗದಿಂದ ವಾಸಿಯಾಗಲು ಯೋರ್ದನ್ ನದಿಯಲ್ಲಿ 7 ಸಾರಿ ಸ್ನಾನ ಮಾಡಲು ಪ್ರವಾದಿಯಾದ ಎಲೀಷನು ಕಳುಹಿಸುತ್ತಾನೆ.

ಮತ್ತೆ ನಾವು ಹೀಗೆ ಓದುತ್ತೇವೆ.

**2 ಅರಸರುಗಳು 2:8 / 13,14**

**"ಅನಂತರ ಎಲೀಯನು ತನ್ನ ಕಂಬಳಿಯನ್ನು ಮಡಚಿ ಅದರಿಂದ ನೀರನ್ನು ಹೊಡೆಯಲು ನೀರು ಎರಡು ಭಾಗವಾಯಿತು; ಇಬ್ಬರೂ ಒಣನೆಲದ ಮೇಲೆ ದಾಟಿಹೋದರು."**

**"ಅನಂತರ ಅವನು ಮೇಲಣಿಂದ ಬಿದ್ದ ಎಲೀಯನ ಕಂಬಳಿಯನ್ನು ತೆಗೆದುಕೊಂಡು ಯೋರ್ದನ್ ನದೀ ತೀರಕ್ಕೆ ಬಂದು ಎಲೀಯನ ದೇವರಾದ ಯೆಹೋವನೆಲ್ಲಿ ಅಂದುಕೊಂಡು ಆ ಕಂಬಳಿಯಿಂದ ನೀರನ್ನು ಹೊಡೆಯಲು ಅದು ಎರಡು ಭಾಗವಾಯಿತು; ಅವನು ದಾಟಿಹೋದನು."**

ಇಲ್ಲಿ **ಎಲೀಯನು** ತನ್ನ ಕಂಬಳಿಯನ್ನು ಮಡಚಿ ಅದರಿಂದ ಯೋರ್ದನ್ ನದಿಯ ನೀರಿಗೆ ಹೊಡೆಯಲು ಅದು ಎಡಕ್ಕೆ ಮತ್ತು ಬಲಕ್ಕೆ ಎರಡು ಭಾಗವಾಯಿತೆಂದು ನೋಡುತ್ತೇವೆ!!



## 3

### "ಸುಳಿಗಾಳಿಯ"

ಮುಖಾಂತರ **ಎಲೀಯನು** ಪರಲೋಕಕ್ಕೆ ಹೋದ ನಂತರ ಎಲೀಷನು ಇದೇ ರೀತಿ ನದಿಯನ್ನು ಎರಡು ಭಾಗ ಮಾಡಿ ದಾಟಿ ಹೋದನು.

ಮತ್ತೆ ಯೋರ್ದನ್ ನದಿಯನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೆಹೋಶುವ 1:1-3**

**"ಯೆಹೋವನ ಸೇವಕನಾದ ಮೋಶೆಯು ಸತ್ತ ಮೇಲೆ ಯೆಹೋವನು ಅವನ ಶಿಷ್ಯನಾದ ನೂನನ ಮಗ ಯೆಹೋಶುವನಿಗೆ - ನನ್ನ ಸೇವಕನಾದ ಮೋಶೆ ಸತ್ತನು; ನೀನು ಈಗ ಎದ್ದು ಸಮಸ್ತ ಪ್ರಜಾಸಹಿತವಾಗಿ ಈ ಯೋರ್ದನ್ ಹೊಳೆಯನ್ನು ದಾಟಿ ನಾನು ಇಸ್ರಾಯೇಲ್ಯರಿಗೆ ಕೊಡುವ ದೇಶಕ್ಕೆ ಹೋಗು. ನಾನು ಮೋಶೆಗೆ ಹೇಳಿದಂತೆ ನೀವು ಕಾಲಿಡುವ ಸ್ಥಳವನ್ನೆಲ್ಲಾ ನಿಮಗೆ ಕೊಟ್ಟಿದ್ದೇನೆ."**

ಇಲ್ಲಿ ಇಸ್ರಾಯೇಲ್ಯರು 40ವರ್ಷ ಅರಣ್ಯದಲ್ಲಿ ಅಲೆದಾಡಿದ **ನಂತರ** ವಾಗ್ದಾನದ ಭೂಮಿಯಾದ ಕಾನಾನಿಗೆ **ಯೋರ್ದನ್ ನದಿಯನ್ನು** ದಾಟಿದ ನಂತರವೇ ಪ್ರವೇಶಿಸಿದರೆಂದು ನೋಡುತ್ತೇವೆ.



ಮತ್ತು ಇದೇ ಯೋರ್ದನ್ ನದಿಯನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮತ್ತಾಯ 3:13**

**"ಆ ಕಾಲದಲ್ಲಿ ಯೇಸು ಯೋಹಾನನಿಂದ ಸ್ನಾನ ಮಾಡಿಸಿಕೊಳ್ಳಬೇಕೆಂದು ಗಲಿಲಾಯದಿಂದ ಯೋರ್ದನ್ ಹೊಳೆಗೆ ಬಂದನು."**

ಹೌದು! ಯೇಸು ಸಹ ದೀಕ್ಷಾಸ್ನಾನ ಹೊಂದಲು **ಯೋರ್ದನ್ ನದಿಯನ್ನು** ಆರಿಸಿಕೊಂಡನು!!



**ಸತ್ಯವೇದದಲ್ಲಿ ಯೋರ್ದನ್ ನದಿಗೆ ಅಷ್ಟೊಂದು ವಿಶೇಷತೆ ಏಕಿದೆ?**


**ಇದು ಏನನ್ನು ಸೂಚಿಸುತ್ತದೆ?**

ಇಂದಿನ ಅಧ್ಯಯನವು ಅದರ ಉತ್ತರದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ.

**ಮೊದಲು ಈ ನದಿ ಮತ್ತು ಇದರ ಆರಂಭ ಮತ್ತು ವಿವರಗಳನ್ನು ಕುರಿತು ಅಭ್ಯಾಸ ಮಾಡೋಣ** -

ಯೋರ್ದನ್ ನದಿಯು ಬೇರೆ ನದಿಗಳಂತೆ ಪರ್ವತದ ಮೇಲಿನಿಂದ **ಆರಂಭಗೊಂಡಿದೆ** ಮತ್ತು ಈ ನದಿಯು **ಲೆಬನೋನಿನ ಹೆರ್ಮೋನ್** ಪರ್ವತದಿಂದ ಪ್ರಾರಂಭಗೊಂಡಿದೆ. ಇದು ಸಮುದ್ರದ ಮಟ್ಟಕ್ಕಿಂತ 9230 **ಅಡಿ** ಎತ್ತರದಲ್ಲಿದೆ. ನೋಡಲು **ಭವ್ಯವಾಗಿಯೂ ಮತ್ತು ಅತಿ ಸುಂದರವಾಗಿಯೂ** ಇದೆ.

ಈ ಪರ್ವತದ ಮೇಲೆ **ಇಬ್ಬನಿ ಬೀಳುತ್ತದೆ** ಮತ್ತು ಅದು 4 **ಭಾಗವಾಗಿ** ಪರ್ವತದ ಮೇಲಿನಿಂದ ಕೆಳಗೆ ಬೀಳುತ್ತದೆ ಆ ಸ್ಥಳವು ಒಂದು ಚಿಕ್ಕ ಹಳ್ಳವಾಗಿ ಮಾರ್ಪಡುತ್ತದೆ ಇದಕ್ಕೆ "**ಹುಲ್ಲ**" **ಸರೋವರ** ಎನ್ನುತ್ತಾರೆ. ಮತ್ತು ಇದನ್ನು "**ಮೆರೋಮ್**" **ಸರೋವರ** ಎಂದೂ ಸಹ ಕರೆಯಲಾಗುತ್ತದೆ. ಈ ಸರೋವರವು **ಶಾಂತಿಯುತವಾಗಿಯೂ ನಿಶ್ಚಲವಾಗಿಯೂ** ಮತ್ತು ಪರ್ವತದ ಮೇಲೆ ಎತ್ತರದ **ಮಟ್ಟದಲ್ಲಿದೆ.**



ನಂತರ ನಾವು ನೋಡುವುದೇನೆಂದರೆ ಈ ಸರೋವರವು ಇದ್ದಕ್ಕಿದ್ದಂತೆ ಬೆಟ್ಟದಿಂದ ಕೆಳಗೆ **ರಭಸವಾಗಿ** ಧುಮುಕಿ **ಕೊಳಕು** ಮತ್ತು **ಕೆಸರಿನೊಂದಿಗೆ** ಬೆರೆತು ಕೊಳಕಾದ ನದಿಯಾಗಿ ಮಾರ್ಪಡುತ್ತದೆ.

ಬೆಟ್ಟದಿಂದ ಕೆಳಗೆ ಇಳಿದ ನಂತರ ಸ್ವಲ್ಪದೂರ ಅತ್ಯಂತ ಕೊಳಕಾದ ಸ್ಥಿತಿಯಲ್ಲಿ ಹರಿದ ನಂತರ **ಗಲಿಲಾಯ ಸಮುದ್ರಕ್ಕೆ** ಸೇರುತ್ತದೆ.

ಈ ನದಿಯು ಗಲಿಲಾಯ ಸಮುದ್ರದ ಮತ್ತೊಂದು ದಡಕ್ಕೆ ಬರುವಾಗ ಅದರ ನೀರು ಬಹಳ **ಶುದ್ಧವಾಗಿರುತ್ತದೆ.**
ಆದರೆ ಅದು ಅಂಕುಡೊಂಕಾಗಿ ಸುಮಾರು 55 ಮೈಲಿಗಳವರೆಗೆ ಹರಿಯುತ್ತದೆ.!

ಈ ನದಿಯು ಸಮುದ್ರದ ಮಟ್ಟಕ್ಕಿಂತ 1300 ಅಡಿ ಕೆಳಗಿರುವ **ಮೃತ್ಯು ಸಮುದ್ರಕ್ಕೆ** ಸೇರುತ್ತದೆ. ಮತ್ತು ಇದು ಭೂಮಿಯ ಅತ್ಯಂತ ಕೆಳಗಿರುವ ಸ್ಥಳವಾಗಿದೆ !

ಮತ್ತು **ಮೃತ್ಯು ಸಮುದ್ರ** ಕುರಿತಾದ **ಆಶ್ಚರ್ಯವೇನೆಂದರೆ,** ಈ ಮೃತ್ಯು ಸಮುದ್ರಕ್ಕೆ ಪ್ರತಿದಿನ 60 **ಲಕ್ಷ ಟನ್‌ಗಳಷ್ಟು** ನೀರು ಹರಿದು ಬರುತ್ತದೆ. – ಆದರೆ ಇದು **ತುಂಬಿ ತುಳುಕುವುದಿಲ್ಲ,** ಮತ್ತು ಈ ಸಮುದ್ರದಿಂದ **ನೀರು ಹೊರಗೆ ಹೋಗಲು ಬೇರೆ ಯಾವ ಮಾರ್ಗವೂ ಸಹ** ಇಲ್ಲ!!

ಇದಲ್ಲದೆ "**ಮೃತ್ಯು ಸಮುದ್ರ**" ಎಂದು ಹೆಸರು ಸೂಚಿಸುವಂತೆ ಇದರಲ್ಲಿ ಯಾವ ಜೀವರಾಶಿಯೂ ಸಹ ಇಲ್ಲ.
ಮತ್ತು ಬೇರೆ ಸಮುದ್ರಕ್ಕಿಂತ ಅತ್ಯಧಿಕವಾಗಿ ಇದರಲ್ಲಿ **ಉಪ್ಪಿನ** ಅಂಶವಿದೆ!!


**ಈ ಮೃತ್ಯು ಸಮುದ್ರದಲ್ಲಿಯೇ ಯೋರ್ದನ್ ನದಿ ಕೊನೆಗೊಳ್ಳುತ್ತದೆ!**

**ಇವೆಲ್ಲದರ ಅರ್ಥವೇನು?**

**ಇದರಿಂದ ನಾವು ಏನಾದರೂ ಪಾಠ ಕಲಿತುಕೊಳ್ಳಬೇಕಾಗಿದೆಯೇ?**

**ಹೌದು! ಇದರಲ್ಲಿಯೇ ಯೋರ್ದನ್ ನದಿಯ ರಹಸ್ಯ ಅಡಗಿದೆ!**

**ಯೋರ್ದನ್ ಎಂದರೆ "ಇಳಿಜಾರು" (ಕೆಳಗಿಳಿಯುವುದು-Descended) ಎಂದರ್ಥ, "ಹುಲ್ಲಾ" ಸರೋವರವು ಹೆರ್ಮೋನ್ ಪರ್ವತದಿಂದ ರಭಸವಾಗಿ ಧುಮುಕಿದ ಕ್ಷಣದಿಂದ ಅದು ಯೋರ್ದನ್ ನದಿಯಾಗುತ್ತದೆ.**




ಹೌದು! ಈ ಯೋರ್ದನ್ ನದಿಯು ದೇವರ ದೈವೀಕ ಯೋಜನೆಯಲ್ಲಿ ಮನುಕುಲವು ಪಾಪ ಮತ್ತು ಮರಣದಲ್ಲಿ ಬೀಳುವುದನ್ನು ಕುರಿತು ಸೂಚಿಸುತ್ತದೆ. ಇದು **ಮೊದಲ ಮತ್ತು ಎರಡನೆಯ ಲೋಕದ** ಕಾಲದವರೆಗೆ **ವಿಸ್ತರಿಸಿದೆ.**

**ಇದು ಬಹಳ ಅದ್ಭುತವಾದ ಸಂಕೇತ ಅಥವಾ ನೆರಳಾಗಿದೆ!!**

ಇದು ಹೇಗೆಂದು ಈಗ ನೋಡೋಣ :–

# ಹೆರ್ಮೋನ್ ಪರ್ವತ

ಈ ಪರ್ವತವು ಮಹಾಮಹಿಮೆ ಮತ್ತು ಮಹಾ **ವೈಭವ** ತುಂಬಿದ **ದೇವರನ್ನು** ಸೂಚಿಸುತ್ತದೆ. ಏಕೆಂದರೆ ಸ್ವತಃ ದೇವರೇ ತನ್ನ ಬಗ್ಗೆ ಹೇಳುವುದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ...

**ಯೆಶಾಯ 57:15** -"**ಸದಮಲನೆನಿಸಿಕೊಂಡು ಶಾಶ್ವತಲೋಕದಲ್ಲಿ ನಿತ್ಯನಿವಾಸಿಯಾದ ಮಹೋನ್ನತನು ಹೀಗನ್ನುತ್ತಾನೆ.........**"



ಆದ್ದರಿಂದ ಹೆರ್ಮೋನ್ ಪರ್ವತವು **ಸ್ವತಃ ದೇವರನ್ನು ಸೂಚಿಸುತ್ತದೆ** ಎಂದು ನೋಡುತ್ತೇವೆ.

## ಇಬ್ಬನಿ

**ಇದು ಏನನ್ನು ಸೂಚಿಸುತ್ತದೆ ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ -

**ಕೀರ್ತನೆ 133:2,3** -"**ಅದು ಆರೋನನ ತಲೆಯ ಮೇಲೆ ಹಾಕಲ್ಪಟ್ಟು ಅವನ ಗಡ್ಡದ ಮೇಲೆಯೂ ಅಲ್ಲಿಂದ ಅವನ ಅಂಗಿಗಳ ಕೊರಳಪಟ್ಟಿಯವರೆಗೂ ಹರಿದುಬರುವ ಶ್ರೇಷ್ಠ ತೈಲದಂತೆಯೂ, ಹೆರ್ಮೋನ್ ಪರ್ವತದಲ್ಲಿ ಹುಟ್ಟಿ ಚಿಯೋನ್ ಪರ್ವತದ ಮೇಲೆ ಬೀಳುವ ಮಂಜಿನಂತೆಯೂ ಇದೆ. ಅಲ್ಲಿ ಆಶೀರ್ವಾದವೂ ಜೀವವೂ ಸದಾಕಾಲ ಇರಬೇಕೆಂದು ಯೆಹೋವನು ಆಜ್ಞಾಪಿದ್ದಾನೆ.**"



ಹೌದು! ಆರೋನನ ತಲೆಯ ಮೇಲೆ ಹಾಕಲ್ಪಟ್ಟ ಶ್ರೇಷ್ಠ ತೈಲವನ್ನು ಹೆರ್ಮೋನ್ ಪರ್ವತಕ್ಕೆ ಹೋಲಿಸಲಾಗಿದೆ.ಆರೋನನ ತಲೆಯ ಮೇಲೆ ಹಾಕಲ್ಪಟ್ಟ ಈ ಅಭಿಷೇಕ ಶ್ರೇಷ್ಠ ತೈಲವು **ದೇವರ ಪವಿತ್ರಾತ್ಮವನ್ನು ಸೂಚಿಸುತ್ತದೆ.**

ಅದೇ ರೀತಿ **"ಹೆರ್ಮೋನ್ ಪರ್ವತದ** (ಇಬ್ಬನಿ) **ಮಂಜು" ದೇವರ ಪವಿತ್ರಾತ್ಮವನ್ನು** ಸೂಚಿಸುತ್ತದೆ. ಹೌದು! ಹೇಗೆ ಹೆರ್ಮೋನ್ ಪರ್ವತವು ದೇವರನ್ನು ಸೂಚಿಸುತ್ತದೋ ಅದೇ ರೀತಿ "ಇಬ್ಬನಿ"ಯು **ದೇವರ ಪವಿತ್ರಾತ್ಮವನ್ನು** ಸೂಚಿಸುತ್ತದೆ!!

## ನಾಲ್ಕು ಹೊಳೆಗಳು

### ಇದು ಏನನ್ನು ಸೂಚಿಸುತ್ತದೆ ?

ಇವು ಪರ್ವತದ ಮೇಲಿರುವುದರಿಂದ ಮತ್ತು ಪರ್ವತವು ದೇವರನ್ನು ಸೂಚಿಸುವುದರಿಂದ ಈ "ನಾಲ್ಕು ಹೊಳೆಗಳು" ದೇವರ ಗುಣಗಳನ್ನು ಸೂಚಿಸುತ್ತವೆ.

ಹೌದು! ದೇವರ ವ್ಯಕ್ತಿತ್ವವನ್ನು ಸೂಚಿಸುತ್ತದೆ ಎಂದು ಹೇಳಬಹುದು!

ಇದರ ಆಳವಾದ ಅರ್ಥಗಳನ್ನು ಮುಂದಿನ ಅಭ್ಯಾಸಗಳಲ್ಲಿ ನೋಡೋಣ.

ಈ ದಿನ ದೇವರನ್ನು ಅಥವಾ **"ತನ್ನ ಸ್ವರೂಪ" ಮತ್ತು "ಹೋಲಿಕೆ"ಯನ್ನು** ಕುರಿತು ನೋಡೋಣ.


## ಹುಲ್ಲಾ ಸರೋವರ

### ಇದು ಏನನ್ನು ಸೂಚಿಸುತ್ತದೆ ?

ಈ ಹುಲ್ಲಾ ಸರೋವರವು "ಇಬ್ಬನಿ" ಮತ್ತು "ನಾಲ್ಕು ಹೊಳೆಗಳು" ಬೀಳುವುದರಿಂದ ಉಂಟಾಗುತ್ತದೆ.

ಇದು ಮೊದಲ ಪರಿಪೂರ್ಣ ಸೃಷ್ಟಿಯಾದ ಮನುಷ್ಯ ಆದಾಮನನ್ನು ಸೂಚಿಸುತ್ತದೆ. ಹೌದು! ದೇವರು ಮನುಷ್ಯನನ್ನು ತನ್ನ ಸ್ವಭಾವ ಮತ್ತು ಹೋಲಿಕೆಯಲ್ಲಿ ಸೃಷ್ಟಿಸಿದನು ಮತ್ತು ಆತನಿಗೆ ಜೀವಶ್ವಾಸವನ್ನು ನೀಡಿದನು.

➡ **"ದೇವರ ಸ್ವರೂಪ ಮತ್ತು ಹೋಲಿಕೆಯಲ್ಲಿ" (ಆದಿಕಾಂಡ 1:26)**



ಆಮೇಲೆ ದೇವರು ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯನನ್ನು ಉಂಟುಮಾಡೋಣ" ..... ಅಂದನು.

ಮತ್ತು ಪವಿತ್ರಾತ್ಮ ಶಕ್ತಿಯಿಂದ ಉಂಟುಮಾಡಿದನು (**ಆದಿಕಾಂಡ** 1:27 / **ಪ್ರಸಂಗಿ** 12:7)

**ಹೌದು! ದೇವರು ಮನುಷ್ಯನನ್ನು ತನ್ನ ಸ್ವಭಾವ ಹೋಲಿಕೆಯಲ್ಲಿ ಸೃಷ್ಟಿಸಿದನು ಮತ್ತು ಆತನಿಗೆ ಜೀವಶ್ವಾಸವನ್ನು ನೀಡಿದನು.**

ಉನ್ನತದಲ್ಲಿರುವ ಹುಲ್ಲಾ ಸರೋವರವು ಭೂಮಿಯ ಎಲ್ಲಾ ಸೃಷ್ಟಿಗಳಿಗಿಂತಲೂ ಮನುಷ್ಯನ ಸೃಷ್ಟಿ ಮತ್ತು ಆತನ ಪರಿಪೂರ್ಣ ಸ್ಥಿತಿಯು **ಅತ್ಯಂತ ಎತ್ತರದಲ್ಲಿದೆಯೆಂದು** ಸೂಚಿಸುತ್ತದೆ!!

**ಹೌದು! ಹುಲ್ಲಾ ಸರೋವರವು ಮನುಷ್ಯನು ಸೃಷ್ಟಿಸಲ್ಪಟ್ಟಾಗ ಆತನ ಪರಿಪೂರ್ಣ ಸ್ಥಿತಿ ಮತ್ತು ಆತನು ಪಾಪ ಮಾಡುವುದಕ್ಕೆ ಮೊದಲು ಏದೇನ್ ತೋಟದಲ್ಲಿದ್ದ ಕಾಲಾವಧಿಯನ್ನು ಸೂಚಿಸುತ್ತದೆ!**

## ಇದು ಏನನ್ನು ಸೂಚಿಸುತ್ತದೆ ?

## ರಭಸವಾಗಿ ಧುಮುಕುವುದು

ಇದು ಆದಾಮನು ಏದೇನ್ ತೋಟದಲ್ಲಿ ಪಾಪ ಮಾಡಿದ್ದರಿಂದ ಪರಿಪೂರ್ಣತೆಯಿಂದ **ಬಿದ್ದುಹೋದದ್ದನ್ನು** ಸೂಚಿಸುತ್ತದೆ! ಹೌದು!

ಪಾಪದ ದೆಸೆಯಿಂದ ಆಕಸ್ಮಿಕವಾಗಿ ಅಪರಿಪೂರ್ಣತೆಯಲ್ಲಿ ಬೀಳುವುದನ್ನು ಸೂಚಿಸುತ್ತದೆ. ಮತ್ತು ಇದರ ದಂಡನೆಯು ಮರಣ.



**ರೋಮಾ 6:23** –"**ಪಾಪವು ಕೊಡುವ ಸಂಬಳ ಮರಣ**"ಈ ಪಾಪ ಮತ್ತು ಮರಣದ ಸ್ಥಿತಿಯು ಆದಾಮನ ಮಕ್ಕಳಿಗೆ ಮತ್ತು ನಂತರ ಇಡೀ ಮನುಷ್ಯಜಾತಿಗೆ ಮುಂದೆ ವರ್ಗಾವಣೆಯಾಯಿತು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ರೋಮಾ 5:12** "**ಈ ವಿಷಯ ಹೇಗೆಂದರೆ - ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರೂ ಪಾಪಮಾಡಿದ್ದರಿಂದ ಮರಣವು ಎಲ್ಲರಲ್ಲಿಯೂ ವ್ಯಾಪಿಸಿತು.**"

ಯಾವ ರೀತಿ ರಭಸದಿಂದ ಧುಮುಕುವ ಯೋರ್ದನ್ ನದಿಯ ನೀರು ಕೆಸರು ಮಿಶ್ರಿತವಾಯಿತೋ ಹಾಗೆಯೇ ಪಾಪದ ಸ್ಥಿತಿಯು ಆದಾಮನ ಮಕ್ಕಳಲ್ಲಿ ಹೆಚ್ಚಾಗುವುದನ್ನು ಇದು ಸೂಚಿಸುತ್ತದೆ.

## ಕೊಳಕಾದ ನೀರು (ಮಣ್ಣು ಮಿಶ್ರಿತ)

### ಇದು ಏನನ್ನು ಸೂಚಿಸುತ್ತದೆ ?

ಇದು ಮೊದಲನೆ ಲೋಕದಲ್ಲಿ ಮನುಷ್ಯನು ಬಹುಬೇಗನೆ **ಕೆಳದರ್ಜೆಗಿಳಿಯುವುದನ್ನು** ಮತ್ತು ಅಧಿಕ **ಪಾಪದ** ಆಳತೆಯನ್ನು ಸೂಚಿಸುತ್ತದೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಆದಿಕಾಂಡ 6:5** "**ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಗಿರುವುದನ್ನೂ ಅವರು ಹೃದಯದಲ್ಲಿ ಯೋಚಿಸುವದೆಲ್ಲವೂ ಯಾವಾಗಲೂ ಕೆಟ್ಟದ್ದಾಗಿರುವುದನ್ನೂ ಯೆಹೋವನು ನೋಡಿ...**"



ಇದರ ಪರಿಣಾವು ನಮಗೆ ಗೊತ್ತಿರುವಂತೆ **ದೇವದೂತರು** ಶರೀರದಲ್ಲಿ ವ್ಯಕ್ತಗೊಂಡಾಗ "**ಮನುಷ್ಯ ಪುತ್ರಿಯರನ್ನು**" ವಿವಾಹ ಮಾಡಿಕೊಂಡು "**ನೆಫಿಲಿಮ್**" ಎಂಬ **ಹೊಸ ಜನಾಂಗವನ್ನು** ಉಂಟುಮಾಡಿದರು.

ಇವರು "ಅರ್ಧ ದೂತರು ಮತ್ತು ಅರ್ಧ ಮನುಷ್ಯ"ರಾಗಿದ್ದರು.
ಹೌದು! ಈ ಹೊಸ ಜನಾಂಗವು ಮನುಷ್ಯರಿಗಿಂತ ಬಹಳ **ಬಲಶಾಲಿಗಳು** ಮತ್ತು **ಮಾನಸಿಕವಾಗಿ** ಬಹಳ ಉನ್ನತವಾಗಿದ್ದರು. ಇದಲ್ಲದೆ **ನೈತಿಕ ನಡತೆಯಲ್ಲಿಯೂ** ಸಹ ಭ್ರಷ್ಟರಾಗಿದ್ದರು ಮತ್ತು ಅವರ **ಭ್ರಷ್ಟ "ದಾರಿಗಳು"** ಮನುಷ್ಯರಿಗೂ ಸಹ ಹರಡಿತು ಮತ್ತು ಇಡೀ ಲೋಕವು ಭ್ರಷ್ಟ ಮತ್ತು ಪಾಪದಲ್ಲಿ ತುಂಬಿತು ಎಂದು ಆದಿಕಾಂಡ 6ನೇ ಅಧ್ಯಾಯದಲ್ಲಿ ಓದುತ್ತೇವೆ.
ಇವೆಲ್ಲಾ ಕಾರಣದಿಂದ ಪಾಪದ ಅಳತೆ ಮತ್ತು **ಕೆಳದರ್ಜೆಗಿಳಿಯುವುದು** ಬಹಳ ಹೆಚ್ಚಾಯಿತು ಮತ್ತು ಇದನ್ನು **"ಕೊಳಕಾದ ನೀರಿಗೆ"** ಸೂಚಿಸಲಾಗಿದೆ.

## ಗಲಿಲಾಯ ಸಮುದ್ರ

### ಇದು ಏನನ್ನು ಸೂಚಿಸುತ್ತದೆ ?

ಇಲ್ಲಿ ನಾವು ನೋಡುವುದೇನೆಂದರೆ ಯೋರ್ದನ್ ನದಿಯು ಕೊಳಕಾದ ಸ್ಥಿತಿಯಲ್ಲಿ ಮುಂದುವರೆದು ಅತ್ಯಧಿಕ ನೀರಿರುವ ಗಲಿಲಾಯ ಸಮುದ್ರಕ್ಕೆ ಪ್ರವೇಶಿಸುವಾಗ ಖಾಲಿಯಾದಂತೆ ಅಥವಾ ಕೊನೆಗೊಂಡಂತೆ ತೋರುತ್ತದೆ.

ಇದು **ಮೊದಲ ಲೋಕದಲ್ಲಿ** ಮನುಷ್ಯ ಜಾತಿಯು **ಜಲಪ್ರಳಯದಲ್ಲಿ** ಕೊನೆಗೊಂಡಿದ್ದನ್ನು ಸೂಚಿಸುತ್ತದೆ!



## ಯೋರ್ದನ್ ನದಿಯ ನೀರು ಶುದ್ಧವಾಗಿ ಗಲಿಲಾಯ ಸಮುದ್ರದ ಮತ್ತೊಂದು ಕಡೆಯಿಂದ ಮತ್ತೆ ಪ್ರಾರಂಭಿಸುತ್ತದೆ.

ಇದು ಜಲಪ್ರಳಯದ ನಂತರ 8 ಜನರೊಂದಿಗೆ ಹೊಸದಾಗಿ ಪ್ರಾರಂಭಿಸುವ ಮನುಷ್ಯ ಜಾತಿಯನ್ನು ಸೂಚಿಸುತ್ತದೆ. ನೋಹನ ಕುಟುಂಬ!

## ಅಂಕುಡೊಂಕಾದ ಮಾರ್ಗ

### ಇದು ಏನನ್ನು ಸೂಚಿಸುತ್ತದೆ ?

ನಾವು ನೆನಪಿನಲ್ಲಿಡಬೇಕಾದದ್ದೇನೆಂದರೆ ಯೋರ್ದನ್ ನದಿಯ ಈ ಭಾಗವು ಮಾನವ ಇತಿಹಾಸದ **ಎರಡನೆಯ ಲೋಕವನ್ನು** ಸೂಚಿಸುತ್ತದೆ. ಆದ್ದರಿಂದ ಈ **ಅಂಕುಡೊಂಕಾದ ಮಾರ್ಗವು** ಎರಡನೆಯ ಲೋಕದ ಮನುಷ್ಯ ಜಾತಿಗೆ ಸಂಬಂಧಪಟ್ಟಿದೆ.

ಇದು ಮನುಷ್ಯ ಜಾತಿಯ ಪಾಪದ ಸ್ಥಿತಿಯನ್ನು ಸೂಚಿಸುತ್ತದೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –




**ಯೆಶಾಯ 59:8 -**

"ತಮ್ಮ ಮಾರ್ಗಗಳನ್ನು ವಕ್ರಮಾಡಿಕೊಂಡಿದ್ದಾರೆ"

ಹೌದು! ಮನುಷ್ಯರ ಮಾರ್ಗಗಳು ಮತ್ತೆ **ವಕ್ರವಾಗಿವೆ!!**

ಇದನ್ನೇ ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಸಂಗಿ 7:29**

"ದೇವರು ಮನುಷ್ಯರನ್ನು ಸತ್ಯವಂತರನ್ನಾಗಿ ಸೃಷ್ಟಿಸಿದನು, ಅವರಾದರೋ ಬಹು ಯುಕ್ತಿಗಳನ್ನು ಕಲ್ಪಿಸಿಕೊಂಡಿದ್ದಾರೆ"

ಹೌದು! **ಮನುಷ್ಯನ ಮಾರ್ಗಗಳು** ಅವರ ಜೀವಿತದಲ್ಲಿ ಎಷ್ಟು ಆಳವಾಗಿ ಬೇರೂರಿದೆಯೆಂದರೆ,

ಕೆಳಗಿನ ವಾಕ್ಯದಲ್ಲಿ ನಾವು ಹೀಗೆ ಓದುತ್ತೇವೆ –

**ಜ್ಞಾನೋಕ್ತಿಗಳು 14:12**

**“ಮನುಷ್ಯ ದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು. ಅದು ಕಟ್ಟಕಡೆಗೆ ಮರಣ ಮಾರ್ಗವೇ”**



ಹೌದು! "ಮರಣ ಮಾರ್ಗವು" **ಪಾಪದ ಮಾರ್ಗವಾಗಿದೆ,** ಏಕೆಂದರೆ ಮರಣವು ಪಾಪದ **ಮೂಲಕವೇ** ಬರುತ್ತದೆ!

ಮನುಷ್ಯರಲ್ಲಿ ಪಾಪದ ಮಾರ್ಗವು ಎಷ್ಟು ಬೇರೂರಿದೆಯೆಂದರೆ ಈಗ "ಪಾಪದ ಮಾರ್ಗವು" ಅವರಿಗೆ **ಸರಿಯಾದದ್ದೆಂದು ತೋರುತ್ತದೆ.**

ಹೌದು! ಮನುಷ್ಯ ಜಾತಿಗೆ ಎಲ್ಲಾ ಪಾಪ ಮಾರ್ಗಗಳು ಸ್ವಭಾವಿಕವಾದದ್ದಾಗಿ ಮತ್ತು ಒಳ್ಳೆಯದಾಗಿ ತೋರುತ್ತದೆ!!

ನಮ್ಮ ಕಣ್ಣುಗಳನ್ನು ಮುಚ್ಚಿ ನಾವು ಮಾಡುವ ಕಾರ್ಯಗಳು, ಆಡುವ ಮಾತು ಮತ್ತು ಯೋಚನೆಗಳನ್ನು ಮತ್ತು ಈ ದಿನ ಲೋಕದಲ್ಲಿ ಸಾಮಾನ್ಯವಾಗಿರುವುದನ್ನು ಚಿಂತಿಸಿ ನೋಡಿದಾಗ "ಪಾಪದ ಮಾರ್ಗವು"
ಎಷ್ಟರ ಮಟ್ಟಿಗೆ ಇದೆಯೆಂದು ನಿಮಗೆ ಅರಿವಾಗುತ್ತದೆ.

**ಮನುಷ್ಯನಿಗೆ ಈಗ ಅದು ಸರಿಯೆಂದು ತೋರುತ್ತದೆ!!**

ಇದಲ್ಲದೆ ಈ ಸ್ವಭಾವವನ್ನು ಯೋರ್ದನ್ ನದಿಯ ಅಂಕುಡೊಂಕಾದ **ದಾರಿಯ** ಮೂಲಕ ಗಲಿಲಾಯ ಸಮುದ್ರವನ್ನು
ಬಿಟ್ಟು ಮೃತ್ಯು ಸಮುದ್ರವನ್ನು ತಲುಪುವವರೆಗೂ ಸುಂದರವಾಗಿ ಸಾಂಕೇತಿಸಲಾಗಿದೆ!

**ಹೌದು! ಎರಡನೆಯ ಲೋಕದ ಪೂರ್ತಿ ಕಾಲವನ್ನು ಸೂಚಿಸಲಾಗಿದೆ!!**

## ಮೃತ್ಯು ಸಮುದ್ರ

### ಇದು ಏನನ್ನು ಸೂಚಿಸುತ್ತದೆ?

ಮೃತ್ಯು ಸಮುದ್ರವು **ಯೋರ್ದನ್ ನದಿಯು ಕೊನೆಯದಾಗಿ** ಹರಿದು ಬಂದು ಸೇರುವ ಸ್ಥಳವಾಗಿದೆ.
ಇದು ಮನುಷ್ಯ ಜಾತಿಯ **ಅಂತ್ಯವೆಂದು** ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಜ್ಞಾನೋಕ್ತಿಗಳು 14:12** – "ಅದು ಕಟ್ಟಕಡೆಗೆ ಮರಣ ಮಾರ್ಗವೇ"

ಹೌದು! ಮೃತ್ಯು ಸಮುದ್ರವು "ಕುಳಿ" ಅಥವಾ ಮರಣದ ಸ್ಥಿತಿಯನ್ನು ಸೂಚಿಸುತ್ತದೆ.
ಇದೇ ಸತ್ಯವೇದದಲ್ಲಿನ ನಿಜವಾದ ಅರ್ಥವಾಗಿದೆ.



**ಪ್ರತಿದಿನ 60 ಲಕ್ಷ ಟನ್ ನೀರು ಮೃತ್ಯು ಸಮುದ್ರವನ್ನು ಸೇರಿದರೂ ಅದು ಹೊರ ಚೆಲ್ಲದೇ ಇರುವುದು–ಇದರ ಅರ್ಥವೇನು?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಜ್ಞಾನೋಕ್ತಿಗಳು 30:16**

**"ಯಾವವಂದರೆ, ಪಾತಾಳ, ಹೆರದ ಗರ್ಭ, ನೀರಿನಿಂದ ತೃಪ್ತಿಪಡದ ಭೂಮಿ, ಸಾಕಾಯಿತೆಂದು ಹೇಳದ ಬೆಂಕಿ, ಇವೇ."**

ಹೌದು ! "ಪಾತಾಳ" (ಕುಳಿ) ಎಂದಿಗೂ **ತುಂಬುವುದಿಲ್ಲ** ಅಲ್ಲದೆ ಅದು ಎಂದಿಗೂ "ಸಾಕು" ಎನ್ನುವುದಿಲ್ಲ **ಅದರ ಸಾಮರ್ಥ್ಯಕ್ಕೆ ಕೊನೆಯಿಲ್ಲ!**

**ಮೃತ್ಯು ಸಮುದ್ರದ ಮಟ್ಟವು ಸಮುದ್ರದ ಮಟ್ಟಕ್ಕಿಂತ 1300 ಅಡಿ ಕೆಳಗಿದೆ.**

**ಇದು ಏನನ್ನು ಸೂಚಿಸುತ್ತದೆ ?**

ಯೋರ್ದನ್ ನದಿಯು ಸಮುದ್ರ ಮಟ್ಟಕ್ಕಿಂತ **9230** ಅಡಿ ಎತ್ತರದಿಂದ ಆರಂಭಗೊಂಡು ಸಮುದ್ರ ಮಟ್ಟಕ್ಕಿಂತ **1300** ಅಡಿ ಕೆಳಗೆ ಮುಕ್ತಾಯಗೊಳ್ಳುತ್ತದೆ.

ಇದು ದೇವರು ಮನುಷ್ಯನನ್ನು ಸೃಷ್ಟಿಸಿದ ಪರಿಪೂರ್ಣತೆಯಿಂದ ಪ್ರಾಣಿಗಳಿಗಿಂತ ಕೆಳಗಿನ ಮಟ್ಟದಲ್ಲಿ **ಬೀಳುವುದನ್ನು** ಸೂಚಿಸುತ್ತದೆ.

(ಪ್ರಾಣಿ ಜಾತಿಗಳನ್ನು ಸಮುದ್ರ ಮಟ್ಟಕ್ಕೆ ಸೂಚಿಸಲಾಗಿದೆ)

**ಹೌದು! ಮನುಷ್ಯ ಜಾತಿಯು ಭಯಂಕರವಾಗಿ ನೀತಿಭ್ರಷ್ಟರಾಗಿ ಪಾಪದ ಮಾರ್ಗಗಳಲ್ಲಿ ಬಿದ್ದು ಹೋಗಿದ್ದಾರೆ.**

ದಾನಿಯೇಲ 4:32–37ರಲ್ಲಿ ಬಿದ್ದು ಹೋದ ಮನುಷ್ಯ ಜಾತಿಯ **ಛಾಯೆಯನ್ನು** ನೋಡಬಹುದು. ಇಲ್ಲಿ ಬಾಬೆಲಿನ **ರಾಜನಾದ ನೆಬೂಕದ್ನೆಚ್ಚರನಿಗೆ** "ಏಳು ವರ್ಷ"ಗಳ ಕಾಲ ಕಾಡು ಮೃಗಗಳೊಂದಿಗೆ ವಾಸಿಸಿ ಅದರಂತೆ ವರ್ತಿಸುವ ಅನುಭವವಾಗುತ್ತದೆ.

ಇದು **ದೇವರ ದೈವೀಕ ಯೋಜನೆಯಲ್ಲಿ** ಮನುಷ್ಯ ಜಾತಿಯ ಅನುಭವದ ಚಿತ್ರಣವಾಗಿದೆ. ಇಲ್ಲಿ "ಏಳು ವರ್ಷ" ಅಥವಾ "ಏಳು ಕಾಲಗಳು" ಎಂಬುದರ ಅರ್ಥವನ್ನು ಮುಂದಿನ ಅಭ್ಯಾಸಗಳಲ್ಲಿ ನೋಡೋಣ.

ಆದ್ದರಿಂದ ನಾವು ನೋಡುವುದೇನೆಂದರೆ ಯೋರ್ದನ್ ನದಿಯು ಮನುಷ್ಯನ ಪರಿಪೂರ್ಣ ಸೃಷ್ಟಿ ಮತ್ತು ನಂತರ ಪರಿಪೂರ್ಣತೆಯಿಂದ ಬಿದ್ದು ಹೋಗುವುದರಿಂದ ಮೊದಲನೆಯ ಮತ್ತು ಎರಡನೆಯ ಲೋಕದಲ್ಲಿ ಉಂಟಾದ ಅನುಭವಗಳ ಕುರಿತಾದ **ಚಿತ್ರಣವಾಗಿದೆ.**

## ಮನುಷ್ಯ ಜಾತಿಯ ಕಥೆಯು ಇಲ್ಲಿಗೆ ಕೊನೆಗೊಳ್ಳುತ್ತದೆಯೇ ?

ದೇವರ ದಯೆಯಿಂದ ಇದಕ್ಕೆ ಉತ್ತರ ಇಲ್ಲ!

ಇದಕ್ಕೆ **ಶುಭ ಸಮಾಚಾರವನ್ನು** ಕೆಳಗಿನ ವಾಕ್ಯದಲ್ಲಿ ಕಾಣಬಹುದು.

### ಯೆಹೆಜ್ಕೇಲ 47:1-12

"ಆ ಮೇಲೆ ಅವನು ನನ್ನನ್ನು ದೇವಸ್ಥಾನದ ಬಾಗಿಲಿಗೆ ಪುನಃ ಕರತಂದನು; ಆಹಾ, ದೇವಸ್ಥಾನದ ಹೊಸ್ತಲ ಕೆಳಗಿನಿಂದ ನೀರು ಹೊರಟು ಮೂಡಲಿಗೆ ಹರಿಯುತ್ತಿತ್ತು (ದೇವಸ್ಥಾನವು ಪೂರ್ವಾಭಿ ಮುಖವಷ್ಟೆ); ಆ ನೀರು ದೇವಸ್ಥಾನದ ಬಲಗಡೆ ಕೆಳೆಗಿನಿಂದ ಹೊರಟು ಯಜ್ಞ ವೇದಿಯ ದಕ್ಷಿಣದಲ್ಲಿ ಹರಿಯುತಿತ್ತು. ಆಗ ಅವನು ನನ್ನನ್ನು ಬಡಗಣ ಹೆಬ್ಬಾಗಿಲಿಂದ ದೇವಾಲಯದ ಹೊರಗಣ ಮಾರ್ಗವಾಗಿ ಸುತ್ತಿಸಿಕೊಂಡು ಮೂಡಲ ಹೆಬ್ಬಾಗಿಲಿಗೆ ಕರತಂದನು; ಅಲ್ಲಿ ನೋಡಲು ಅದರ ಬಲಗಡೆ ಮೆಲ್ಲಮೆಲ್ಲನೆ ಹರಿಯುವ ನೀರು ಕಾಣಿಸಿತು. ಆ ಪುರುಷನು ಕೈಯಲ್ಲಿ ಹುರಿಯನ್ನು ಹಿಡಿದುಕೊಂಡು ಮೂಡಲಿಗೆ ಮುಂದರಿದು ಸಾವಿರ ಮೊಳ ಅಳೆದು ನನ್ನನ್ನು ನೀರಿನ ಆಚೆಗೆ ದಾಟಿಸಿದನು; ಅಲ್ಲಿ ನೀರು ಹೆಜ್ಜೆ ಮುಳುಗುವಷ್ಟಿತ್ತು. ಅವನು ಪುನಃ ಸಾವಿರ ಮೊಳ ಅಳೆದು ನನ್ನನ್ನು ನೀರಿನ ಆಚೆಗೆ ದಾಟಿಸುವಾಗ ಆ ನೀರು ಮೊಣಕಾಲಿನವರೆಗೆ ಇತ್ತು. ಅವನು ಪುನಃ ಸಾವಿರ ಮೊಳ ಅಳೆದು ನನ್ನನ್ನು ನೀರಿನ ಆಚೆಗೆ ದಾಟಿಸುವಾಗ ನೀರು ಸೊಂಟದ ವರೆಗೆ ಇತ್ತು. ಅವನು ಮತ್ತೆ ಸಾವಿರ ಮೊಳ ಅಳೆದನು; ಅದು ನನ್ನಿಂದ ದಾಟಲಾಗದ ತೊರೆಯಾಗಿತ್ತು; ನೀರು ಏರಿ ಈಜಾಡುವಷ್ಟು ಪ್ರವಾಹವಾಗಿತ್ತು, ದಾಟಲಾಗದ ತೊರೆಯಾಗಿತ್ತು; ಆಗ ಅವನು ನನಗೆ - ನರಪುತ್ರನೇ, ಇದನ್ನು ನೋಡಿದಿಯಾ ಎಂದು ಹೇಳಿ ನನ್ನನ್ನು ತೊರೆಯ ದಡಕ್ಕೆ ಹತ್ತಿಸಿ ಹಿಂದಿರುಗಿಸಿದನು. ನಾನು ಹಿಂದಿರುಗಲು ಆಹಾ, ತೊರೆಯ ಎರಡು ದಡಗಳಲ್ಲಿಯೂ ಅನೇಕಾನೇಕ ವೃಕ್ಷಗಳು ಕಾಣಿಸಿದವು. ಆಗ ಅವನು ನನಗೆ

ಹೀಗೆ ಹೇಳಿದನು - ಈ ಪ್ರವಾಹವು ಪೂರ್ವಪ್ರಾಂತ್ಯಕ್ಕೆ ಹೊರಟು ಅರಾಬಾ ಎಂಬ ತಗ್ಗಿಗೆ ಇಳಿದು ಲವಣಸಮುದ್ರದ ಕಡೆಗೆ ಹರಿಯುವದು; (ದೇವಸ್ಥಾನದಿಂದ) ಹೊರಟ ಪ್ರವಾಹವು ಲವಣಸಮುದ್ರಕ್ಕೆ (ಸೇರಲು) ಅದರ ನೀರು ಸಿಹಿಯಾಗುವದು. ಈ ತೊರೆಯು ಎಲ್ಲೆಲ್ಲಿ ಹರಿಯುತ್ತದೋ ಅಲ್ಲಲ್ಲಿ ಗುಂಪುಗುಂಪಾಗಿ ಚಲಿಸುವ ಸಕಲ ವಿಧಜಲಜಂತುಗಳು ಬದುಕಿ ಬಾಳುವವು; ಮೀನುಗಳು ತಂಡೋಪತಂಡವಾಗಿರುವವು. ಈ ನೀರು ಸಮುದ್ರಕ್ಕೆ ಬೀಳಲು (ಆ ನೀರೂ) ಸಿಹಿಯಾಗುವದು; ಈ ತೊರೆಯು ಎಲ್ಲೆಲ್ಲಿ ಹರಿದರೂ ಅಲ್ಲಲ್ಲಿ ಜೀವವುಂಟಾಗುವದು. ಆಗ ಆ ಸಮುದ್ರದ ತೀರದಲ್ಲಿ ಬೆಸ್ತರು ನಿಂತಿರುವರು; ಏನ್ಗೆದಿಯಿಂದ ಏನ್ ಎಗ್ಲಯಿಮಿನ ವರೆಗೆ ದಡವೆಲ್ಲಾ ಬಲೆ ಹಾಸುವ ಸ್ಥಳವಾಗುವದು; ಬಗೆಬಗೆಯ ಮೀನುಗಳು ಮಹಾಸಾಗರದ ಮೀನುಗಳಂತೆ ಅವರಿಗೆ ರಾಶಿರಶಿಯಾಗಿ ಸಿಕ್ಕುವವು. ಆದರೆ ಅದರ ಸುತ್ತಣ ಜವುಗು ನೆಲವೂ ಸವುಳುಹೊಂಡಗಳೂ ಸಿಹಿಯಾಗುವದಿಲ್ಲ, ಅವು ಉಪ್ಪಿನ ಗಣಿಯಾಗುವವು. ತೊರೆಯ ಎರಡು ದಡಗಳಲ್ಲಿಯೂ ಸಕಲ ಫಲವೃಕ್ಷಗಳು ಬೆಳೆಯುವವು; ಅವುಗಳ ಎಲೆ ಬಾಡದು, ಹಣ್ಣು ತೀರದು; ತೊರೆಯ ನೀರು ಪವಿತ್ರಾಲಯದೊಳಗಿಂದ ಹೊರಟು ಬರುವ ಕಾರಣ ಅವು ತಿಂಗಳುತಿಂಗಳಲ್ಲಿಯೂ ಹೊಸ ಹೊಸ ಫಲವನ್ನು ಕೊಡುತ್ತಲಿರುವವು; ಅವುಗಳ ಹಣ್ಣು ಆಹಾರಕ್ಕೂ ಸೊಪ್ಪು ಔಷಧಕ್ಕೂ ಅನುಕೂಲಿಸುವವು.”

ಹೌದು! ಇಲ್ಲಿ **ಜೀವವನ್ನುಂಟು ಮಾಡುವ** ಇನ್ನೊಂದು ನದಿಯನ್ನು ಕುರಿತು ಓದುತ್ತೇವೆ.!!

ಮತ್ತು ಇದೇ ನದಿಯನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ. –

## ಪ್ರಕಟನೆ 22:1,2

“ಆ ಮೇಲೆ ಅವನು ಸ್ಫಟಿಕದಂತೆ ಪ್ರಕಾಶ ಮಾನವಾಗಿದ್ದ ಜೀವಜಲದ ನದಿಯನ್ನು ನನಗೆ ತೋರಿಸಿದನು.ಅದು ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನದಿಂದ ಹೊರಟು ಪಟ್ಟಣದ ಬೀದಿಯ ಮಧ್ಯದಲ್ಲಿ ಹರಿಯುತ್ತಿತ್ತು. ಆ ನದಿಯ ಉಭಯಪಾರ್ಶ್ವಗಳಲ್ಲಿ ಜೀವವೃಕ್ಷವಿತ್ತು; ಅದು ತಿಂಗಳು ತಿಂಗಳಿಗೆ ಫಲವನ್ನು ಫಲಿಸುತ್ತಾ ಹನ್ನೆರಡು ತರದ ಫಲಗಳನ್ನು ಕೊಡುತ್ತದೆ. ಆ ಮರದ ಎಲೆಗಳು ಜನಾಂಗದವರನ್ನು ವಾಸಿಮಾಡುವದಕ್ಕೆ ಪ್ರಯೋಜನವಾಗಿವೆ.”

ಹೌದು! "ಮರಣದ ನದಿ”ಯಾಗಿದ್ದ (ಜ್ಞಾನೋಕ್ತಿಗಳು 14:12) ಯೋರ್ದನ್ ನದಿಯು ಪುನಃ **ಜೀವಂತಗೊಳ್ಳುವ** ಇನ್ನೊಂದು ನದಿಯಾಗಿ ಮಾರ್ಪಡುತ್ತದೆ.

ಅದುವೇ “ಜೀವ ಜಲದ ನದಿ” ಎಂದು ಮೇಲಿನ ಎರಡು ವಾಕ್ಯಗಳಲ್ಲಿ ನೋಡಿದೆವು.

## ಮೃತ್ಯು ಸಮುದ್ರದಲ್ಲಿ ಹೋಗಿ ಕೊನೆಗೊಳ್ಳುವ ಈ "ಜೀವಜಲದ ನದಿ"ಯಾದ ಯೋರ್ದನ್ ನದಿಯು ಮೃತ್ಯು ಸಮುದ್ರಕ್ಕೆ ಜೀವಕೊಡುವುದೆಂದು ನಮಗೆ ಹೇಗೆ ಗೊತ್ತಾಗುತ್ತದೆ?

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದೋಣ –

### ಯೆಹೆಜ್ಕೇಲ 47:8,9

"ಆಗ ಅವನು ನನಗೆ ಹೀಗೆ ಹೇಳಿದನು - ಈ ಪ್ರವಾಹವು ಪೂರ್ವಪ್ರಾಂತ್ಯಕ್ಕೆ ಹೊರಟು ಅರಾಬಾ ಎಂಬ ತಗ್ಗಿಗೆ ಇಳಿದು ಲವಣಸಮುದ್ರದ ಕಡೆಗೆ ಹರಿಯುವದು; (ದೇವಸ್ಥಾನದಿಂದ) ಹೊರಟ ಪ್ರವಾಹವು ಲವಣಸಮುದ್ರಕ್ಕೆ (ಸೇರಲು) ಅದರ ನೀರು ಸಿಹಿಯಾಗುವದು. ಈ ತೊರೆಯು ಎಲ್ಲೆಲ್ಲಿ ಹರಿಯುತ್ತದೋ ಅಲ್ಲಲ್ಲಿ ಗುಂಪುಗುಂಪಾಗಿ ಚಲಿಸುವ ಸಕಲ ವಿಧಜಲಜಂತುಗಳು ಬದುಕಿ ಬಾಳುವವು; ಮೀನುಗಳು ತಂಡೋಪತಂಡವಾಗಿರುವವು. ಈ ನೀರು ಸಮುದ್ರಕ್ಕೆ ಬೀಳಲು (ಆ ನೀರೊ) ಸಿಹಿಯಾಗುವದು; ಈ ತೊರೆಯು ಎಲ್ಲೆಲ್ಲಿ ಹರಿದರೂ ಅಲ್ಲಲ್ಲಿ ಜೀವವುಂಟಾಗುವದು."

ಹೌದು! ಇದು **ಜೀವವಿಲ್ಲದೆಯಿರುವ ಮೃತ್ಯು ಸಮುದ್ರವನ್ನು** ಸೂಚಿಸುತ್ತದೆ ಮತ್ತು **ಈ ಯೋರ್ದನ್ ನದಿಯು ಮೃತ್ಯು ಸಮುದ್ರಕ್ಕೆ ಜೀವಕೊಡುತ್ತದೆ!!**

ಈಗ ಈ "ಜೀವಜಲದ ನದಿ" ಎಂದರೇನು ಎಂದು ನೀವು ಕೇಳಬಹುದು, ಈ ನದಿಯನ್ನು ಕುರಿತು ಮೂರು ವಾಕ್ಯಗಳಲ್ಲಿ ಕೊಟ್ಟಿರುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

### ಯೆಹೆಜ್ಕೇಲ 47:1, ಕೀರ್ತನೆ 46:4, ಪ್ರಕಟನೆ 22:1


"ಆ ಮೇಲೆ ಅವನು ನನ್ನನ್ನು ದೇವಸ್ಥಾನದ ಬಾಗಿಲಿಗೆ ಪುನಃ ಕರತಂದನು; ಆಹಾ, ದೇವಸ್ಥಾನದ ಹೊಸ್ತಲ ಕೆಳಗಿನಿಂದ ನೀರು ಹೊರಟು ಮೂಡಲಿಗೆ ಹರಿಯುತ್ತಿತ್ತು (ದೇವಸ್ಥಾನವು ಪೂರ್ವಾಭಿ ಮುಖವಷ್ಟೆ); ಆ ನೀರು ದೇವಸ್ಥಾನದ ಬಲಗಡೆ ಕೆಳೆಗಿನಿಂದ ಹೊರಟು ಯಜ್ಞ ವೇದಿಯ ದಕ್ಷಿಣದಲ್ಲಿ ಹರಿಯುತಿತ್ತು."

"ಒಂದು ನದಿ ಅದೆ; ಅದರ ಕಾಲಿವೆಗಳು ಪರತ್ಪರನ ಪರಿಶುದ್ಧನಿವಾಸಸ್ಥಾನವಾಗಿರುವ ದೇವನಗರವನ್ನು ಸಂತೋಷಪಡಿಸುತ್ತವೆ."

"ಆ ಮೇಲೆ ಅವನು ಸ್ಫಟಿಕದಂತೆ ಪ್ರಕಾಶ ಮಾನವಾಗಿದ್ದ ಜೀವಜಲದ ನದಿಯನ್ನು ನನಗೆ ತೋರಿಸಿದನು.ಅದು ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನದಿಂದ ಹೊರಟು ಪಟ್ಟಣದ ಬೀದಿಯ ಮಧ್ಯದಲ್ಲಿ ಹರಿಯುತ್ತಿತ್ತು."

ಹೌದು! ಈ ವಾಕ್ಯಗಳಲ್ಲಿ ಕೊಟ್ಟಿರುವಂತಹ ನದಿ ಮತ್ತು ಅದರ ನೀರು ಇಡೀ ಲೋಕಕ್ಕೆ ದೇವರು ಕೊಡುವಂತಹ

**"ಜೀವ ಜಲವಾದ ಸತ್ಯವನ್ನು" ಸೂಚಿಸುತ್ತದೆ.**



**ಪ್ರಕಟನೆ 22:17**

**"ಆತ್ಮನೂ ಮದಲಗಿತ್ತಿಯೂ - ಬಾ ಅನ್ನುತ್ತಾರೆ. ಕೇಳುವವನು - ಬಾ ಅನ್ನಲಿ. ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ"**

ಸಾವಿರ ವರ್ಷದ ಯುಗದಲ್ಲಿ ಪಾಪ ಮತ್ತು ಮರಣದ ಪರಿಣಾಮಗಳಿಂದ ಇದು ಅವರನ್ನು ವಾಸಿಮಾಡುತ್ತದೆ.

**ಹೌದು! ಏಕೆಂದರೆ ಬೇರೆ ಯಾವ ರೀತಿಯಲ್ಲಿ ಎಲ್ಲಾ ಮನುಷ್ಯ ಜಾತಿಯು 'ಪಾಪ"ಗಳಿಂದ ವಾಸಿಯಾಗಲು ಸಾಧ್ಯ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.



## ಯೋಹಾನ 17:17

"ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು; ನಿನ್ನ ವಾಕ್ಯವೇ ಸತ್ಯವು."

ಹೌದು! **ಸತ್ಯದ** ಬಲದಿಂದ **ಮಾತ್ರ** "ಪಾಪಗಳ" ಮಾರ್ಗಗಳಿಂದ ಮರಣದಿಂದ ವಾಸಿಯಾಗಲು ಸಾಧ್ಯ!

**ಪ್ರಿಯ ಸಹೋದರ ಸಹೋದರಿಯರೇ ಇಲ್ಲಿಯವರೆಗೂ ನಮ್ಮ ಮೇಲೆ ಸತ್ಯದ ಪರಿಣಾಮವನ್ನು ನೋಡಿದಿರಾ?**


ಈಗ ಈ ನದಿ ಮತ್ತು ವಿಶಿಷ್ಟವಾಗಿ ಹರಿಯುವ ಲಕ್ಷಣವನ್ನು ಕುರಿತು ನೋಡೋಣ –

## ಯೆಹೆಜ್ಕೇಲ 47:3-6

"ಆ ಪುರುಷನು ಕೈಯಲ್ಲಿ ಹುರಿಯನ್ನು ಹಿಡಿದುಕೊಂಡು ಮೂಡಲಿಗೆ ಮುಂದರಿದು ಸಾವಿರ ಮೊಳ ಅಳೆದು ನನ್ನನ್ನು ನೀರಿನ ಆಚೆಗೆ ದಾಟಿಸಿದನು; ಅಲ್ಲಿ ನೀರು ಹೆಜ್ಜೆ ಮುಳುಗುವಷ್ಟಿತ್ತು. ಅವನು ಪುನಃ ಸಾವಿರ ಮೊಳ ಅಳೆದು ನನ್ನನ್ನು ನೀರಿನ ಆಚೆಗೆ ದಾಟಿಸುವಾಗ ಆ ನೀರು ಮೊಣಕಾಲಿನವರೆಗೆ ಇತ್ತು. ಅವನು ಪುನಃ ಸಾವಿರ ಮೊಳ ಅಳೆದು ನನ್ನನ್ನು ನೀರಿನ ಆಚೆಗೆ ದಾಟಿಸುವಾಗ ನೀರು ಸೊಂಟದ ವರೆಗೆ ಇತ್ತು. ಅವನು ಮತ್ತೆ ಸಾವಿರ ಮೊಳ ಅಳೆದನು; ಅದು ನನ್ನಿಂದ ದಾಟಲಾಗದ ತೊರೆಯಾಗಿತ್ತು; ನೀರು ಏರಿ ಈಜಾಡುವಷ್ಟು ಪ್ರವಾಹವಾಗಿತ್ತು, ದಾಟಲಾಗದ ತೊರೆಯಾಗಿತ್ತು; ಅಗ ಅವನು ನನಗೆ - ನರಪುತ್ರನೇ, ಇದನ್ನು ನೋಡಿದಿಯಾ ಎಂದು ಹೇಳಿ ನನ್ನನ್ನು ತೊರೆಯ ದಡಕ್ಕೆ ಹತ್ತಿಸಿ ಹಿಂದಿರುಗಿಸಿದನು."

ಇಲ್ಲಿ ನಾವು ನೋಡುವುದೇನೆಂದರೆ ನೀರು **ಕ್ರಮೇಣವಾಗಿ** ಹರಿದು **ಹೆಚ್ಚುತ್ತಾ** ಹೋಗುತ್ತದೆ. ಇದು **ಕ್ರಮೇಣ** ಲೋಕದ ಎಲ್ಲಾ ದೇಶಗಳಿಗೆ ಸತ್ಯವು ಹರಡುವುದನ್ನು ಮತ್ತು **ಹೆಚ್ಚಾಗುವುದನ್ನು** ಸೂಚಿಸುತ್ತದೆ. ಮತ್ತು ಅದರ ಹೊಸ ಸೃಷ್ಟಿ ಮತ್ತು ಸಮಸ್ತವನ್ನು ಸರಿಮಾಡುವ ಕಾಲವನ್ನು ಸೂಚಿಸುತ್ತದೆ. ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮತ್ತಾ೦ಯನು** 19:28 –"....ಹೊಸ ಸೃಷ್ಟ೦ಯಲ್ಲಿ ಮನುಷ್ಯಕುಮಾರನು ತನ್ನ ಮಹಿಮೆ೦ಯ ಸಿಂಹಾಸನದ ಮೇಲೆ ಕೂತುಕೊಳ್ಳುವಾಗ...." **ಅಪೋಸ್ತಲರ ಕೃತ್ಯಗಳು** 3:21 – "ಆದರೆ ಸಮಸ್ತವನ್ನು ಸರಿಮಾಡುವ ಕಾಲವು ಬರುವ ತನಕ....."



**ವಿಧವಿಧವಾದ ನೀರಿನ ಅಳತೆಗಳು ಇದು ಏನನ್ನು ಸೂಚಿಸುತ್ತದೆ?**


ಇಲ್ಲಿ ಒಬ್ಬ ಪುರುಷನನ್ನು ಅಳತೆಯ ಸಾಧನವಾಗಿ ಉಪಯೋಗಿಸಿರುವುದನ್ನು ನೋಡುತ್ತೇವೆ.

**ಏಕೆ ?**

ಪರುಷನೆಂಬುದು ಎಲ್ಲಾ ದೇಶಗಳಲ್ಲಿರುವ ಮನುಷ್ಯ ಜಾತಿಯನ್ನು ಸೂಚಿಸುತ್ತದೆ.

**ನೀರಿನ ಬೇರೆ ಬೇರೆ ಎತ್ತರಗಳು ಲೋಕದ ಎಲ್ಲಾ ದೇಶಗಳಲ್ಲಿ ಸತ್ಯವು ಹರಡಿರುವುದನ್ನು ಮತ್ತು ಅಂಗೀಕರಿಸುವುದನ್ನು ಸೂಚಿಸುತ್ತದೆ. ಅಳತೆಯ ಪುರಿ- ವಿವಿಧ ದೇಶಗಳಲ್ಲಿರುವ ಎಲ್ಲಾ ಮನುಷ್ಯ ಜಾತಿಯನ್ನು ಸೂಚಿಸುತ್ತದೆ.**

**ಪ್ರಾರಂಭದಲ್ಲಿ ನೀರಿನ ಅಳತೆಯನ್ನು ನೋಡುವಾಗ**



**“ನೀರು ಕಣಕಾಲುವರೆಗೆ ಇತ್ತು”**

ಮೊಣಕಾಲಿನ ಎತ್ತರವು ದೇಹದ ಎತ್ತರಕ್ಕೆ ಹೋಲಿಸಿದಾಗ ಅಲ್ಪವಾಗಿಯೂ ಮತ್ತು ಬಹಳ ಚಿಕ್ಕದಾಗಿಯೂ ಇದೆ. ಅದರಂತೆಯೇ ಸತ್ಯವು ಬಹಳ ಅಲ್ಪವಾದ ಹಾಗೂ ಲೋಕದ ಚಿಕ್ಕ ದೇಶವಾದ ಇಸ್ರಾಯೇಲಿನಿಂದ ಪ್ರಕಟವಾಗುತ್ತದೆ.

ಹೌದು! ರಾಜ್ಯವು **ಕಣ್ಣಿಗೆ ಕಾಣುವಂತೆ** ಮೊದಲು ಇಸ್ರಾಯೇಲಿನಲ್ಲಿ ಸ್ಥಾಪಿತವಾಗುವುದು ಮತ್ತು **ಸತ್ಯದ** ಆಶೀರ್ವಾದಗಳು **ಮೊದಲು**



ಇಲ್ಲಿಂದ ಹರಿದು ಬರುವುದೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಜೆಕರ್ಯ 14:8**

**“.....ಆ ದಿನದಲ್ಲಿ ಜೀವಕರವಾದ ಜಲಪ್ರವಾಹವು ಯೆರೂಸಲೇಮಿನೊಳಗಿಂದ ಹೊರಡುವದು;.....”**

**ನಂತರ ನಾವು ಹೀಗೆ ಓದುತ್ತೇವೆ –**

**“ನೀರು ಮೊಣಕಾಲಿನವರೆಗೆ ಇತ್ತು”**

ಮೊಣಕಾಲು ಎಂಬುದು
ದೇಹದ **ಕಾಲು** ($\frac{1}{4}$) ಭಾಗವನ್ನು ಸೂಚಿಸುತ್ತದೆ.



ಆದ್ದರಿಂದ **ಸತ್ಯ** ಮತ್ತು ಅದರ ಆಶೀರ್ವಾದಗಳನ್ನು ಎಲ್ಲಾ ದೇಶದ ಕಾಲು ಭಾಗದವರು ಅಂಗೀಕರಿಸಿಕೊಳ್ಳುವರು ಉಳಿದವರು ಅದರ ಪರಿಣಾಮವೇನಾಗುವುದೆಂದು **ಕಾದು ನೋಡುವರು!!**

ಹೌದು! ಲೋಕದ ಎಲ್ಲಾ **ದೇಶದವರು** ಇಸ್ರಾಯೇಲಿನಲ್ಲಿ



ಕರ್ತನನ್ನು ಮತ್ತು ಆತನ ವಾಕ್ಯವನ್ನು ಹುಡುಕಿಕೊಂಡು ಬರುವರೆಂದು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**ಯೆಶಾಯ 2:3**

**"ಹೊರಟು ಬಂದ ಬಹು ಜನಾಂಗದವರು - ಬನ್ನಿರಿ, ಯೆಹೋವನ ಪರ್ವತಕ್ಕೆ, ಯಾಕೋಬ್ಯರ ದೇವರ ಮಂದಿರಕ್ಕೆ, ಹೋಗೋಣ! ಆತನು ತನ್ನ ಮಾರ್ಗಗಳ ವಿಷಯವಾಗಿ ನಮಗೆ ಬೋಧನೆ ಮಾಡುವನು, ನಾವು ಆತನ ದಾರಿಗಳಲ್ಲಿ ನಡೆಯುವೆವು ಎಂದು ಹೇಳುವರು."**

ಇಲ್ಲಿ ಬಹಳ ಸ್ಪಷ್ಟವಾಗಿ ಕೊಟ್ಟಿದೆ.

ಯೆರೂಸಲೇಮಿಗೆ ದೇವರನ್ನು ಆತನ ರಾಜ್ಯ ಮತ್ತು ಆಶೀರ್ವಾದಗಳನ್ನು ಹುಡುಕಿಕೊಂಡು ಎಲ್ಲಾ ದೇಶದವರು ಬರುವರು.




**ಸಾವಿರ ಮೊಳ** - ಇದು ಕಾಲವನ್ನು ಸೂಚಿಸುತ್ತದೆ.

**ನಂತರ ನಾವು ಮುಂದೆ ಹೀಗೆ ಓದುತ್ತೇವೆ –**

**"ನೀರು ಸೊಂಟದವರೆಗೆ ಇತ್ತು"**

ಸೊಂಟದ ಎತ್ತರವು ದೇಹದ ಅರ್ಧ ಭಾಗವನ್ನು ಸೂಚಿಸುತ್ತದೆ.

ಕ್ರಮೇಣವಾಗಿ **ಸತ್ಯ** ಮತ್ತು ಅದರ ಆಶೀರ್ವಾದಗಳನ್ನು ಎಲ್ಲಾ ದೇಶದ ಇನ್ನೂ **ಕಾಲು** **($\frac{1}{4}$)** ಭಾಗದವರು ಅಂಗೀಕರಿಸುವರು ಆದ್ದರಿಂದ ಒಟ್ಟು ಲೋಕದ ಅರ್ಧ **($\frac{1}{2}$)** ಭಾಗದವರು



ಸ್ವಯಂ ಪ್ರೇರಿತರಾಗಿ ರಾಜ್ಯದ ವ್ಯವಸ್ಥೆಯೊಳಗೆ ಪ್ರವೇಶಿಸುವರು ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಜೆಕರ್ಯ 8:22** -"ಹೀಗೆ ಬಹು ದೇಶಗಳವರೂ ಬಲವಾದ ಜನಾಂಗಗಳವರೂ ಯೆರೂಸಲೇಮಿನಲ್ಲಿ ಸೇನಾಧೀಶ್ವರ ಯೆಹೋವನನ್ನು ಆಶ್ವಯಿಸುವುದಕ್ಕೂ ಯೆಹೋವನ ಪ್ರಸನ್ನತೆಯನ್ನು ಬೇಡುವುದಕ್ಕೂ ಬರುವರು."

**ನಂತರ ನಾವು ಹೀಗೆ ಓದುತ್ತೇವೆ –**


**"ನೀರು ಏರಿ ಈಜಾಡುವಷ್ಟು ಪ್ರವಾಹವಾಗಿತ್ತು"**



ಮನುಷ್ಯನ **ಪೂರ್ತಿ** ಎತ್ತರ!

ಹೌದು! ಬೇಗನೆ ಲೋಕದ ಎಲ್ಲಾ ಮನುಷ್ಯಜಾತಿಯು **ಸತ್ಯದಲ್ಲಿ** ಮತ್ತು ರಾಜ್ಯ ಮತ್ತು ಅದರ ಆಶೀರ್ವಾದಗಳಲ್ಲಿ ಪ್ರವೇಶಿಸುವರು!!

ಹೌದು! "ಬದುಕಿರುವ ಎಲ್ಲಾ ದೇಶದವರು ರಾಜ್ಯದೊಳಗೆ ಬರುವರು ಮತ್ತು ಇಡೀ



ಲೋಕವನ್ನು ಆವರಿಸಿಕೊಳ್ಳಲು ರಾಜ್ಯವು ತನ್ನ ಎಲ್ಲೆಯನ್ನು ವಿಸ್ತರಿಸುವುದು ಮತ್ತು ಈ ಪ್ರವಾದನಾ ವಾಕ್ಯವು ನೆರವೇರುವುದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಕೀರ್ತನೆ 72 : 8

**"ಅವನು ಸಮುದ್ರದಿಂದ ಸಮುದ್ರದವರೆಗೂ [ಯೂಫ್ರೇಟೀಸ್] ನದಿಯಿಂದ ಭೂಮಿಯ ಕಟ್ಟ ಕಡೆಯವರೆಗೂ ಆಳಲಿ"**

ಈ **ಕ್ರಮೇಣವಾದ ಬೆಳವಣಿಗೆಯ** ವಿಧಾನವನ್ನು ಕುರಿತು **ದಾನಿಯೇಲ** 2:35ರಲ್ಲಿಯೂ ಸಹ ತೋರಿಸಲಾಗಿದೆ.

**"ಆಗ ಕಬ್ಬಿಣ ಮಣ್ಣು ತಾಮ್ರ ಬೆಳ್ಳಿ ಬಂಗಾರಗಳೆಲ್ಲವೂ ಪುಡಿಪುಡಿಯಾಗಿ ಸುಗ್ಗಿಯ ಕಣಗಳ ಹೊಟ್ಟಿನಂತಾದವು; ಗಾಳಿಯು ತೂರಿಕೊಂಡು ಹೋಗಲು ಅವುಗಳಿಗೆ ನೆಲೆಯೇ ಇಲ್ಲವಾಯಿತು. ಪ್ರತಿಮೆಗೆ ಬಡಿದ ಆ ಬಂಡೆಯು ಮಹಾ ಪರ್ವತವಾಗಿ ಲೋಕದಲ್ಲೆಲ್ಲಾ ತುಂಬಿಕೊಂಡಿತು"**

ಆ **ಬಂಡೆಯೂ** ಸಹ **ಮಹಾಪರ್ವತವಾಗಿ** ಎಂಬುದು ದೇವರ ರಾಜ್ಯದ ಆಶೀರ್ವಾದಗಳು ಮತ್ತು ಅದು **ಕ್ರಮೇಣವಾಗಿ** ಅಭಿವೃದ್ಧಿಯಾಗುವುದನ್ನು ಸೂಚಿಸುತ್ತದೆ.

ಇದೇ ವಿಷಯವನ್ನು ಕೆಳಗಿನ ವಾಕ್ಯದಲ್ಲಿ ನೋಡಬಹುದು.

## ಯೆಶಾಯ 9:7

**"ಅವನ ಮುಖಾಂತರ ದಾವೀದನ ಸಿಂಹಾಸನದ ಆಡಳಿತವು ಅಭಿವೃದ್ಧಿಯಾಗುವುದು, ದಾವೀದನ ರಾಜ್ಯದಲ್ಲಿ ನಿತ್ಯ ಸಮಾಧಾನವಿರುವುದು.**
**ಆ ರಾಜ್ಯವು ಇಂದಿನಿಂದ ಯಾವಾಗಲೂ ನೀತಿನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವುದು; ಸೇನಾಧೀಶ್ವರನಾದದ ಯೆಹೋವನ ಆಗ್ರಹವು ಇದನ್ನು ನೆರವೇರಿಸುವುದು"**

ಹೌದು! ದೇವರ ರಾಜ್ಯ ಮತ್ತು ಅದರ **ಆಡಳಿತವು** ಎಲ್ಲಾ ದೇಶಗಳ ಮೇಲೆ **ಕ್ರಮೇಣವಾಗಿ ಅಭಿವೃದ್ಧಿಯಾಗುವುದು** ಮತ್ತು

**"ಈ ಅಭಿವೃದ್ಧಿಗೆ ಕೊನೆಯೇ ಇರುವುದಿಲ್ಲ"**

ಅಂದರೆ ಈ ರಾಜ್ಯವು ಕ್ರಮೇಣವಾಗಿ ವಿಸ್ತಾರ ಹೊಂದುತ್ತಾ ಲೋಕದಲ್ಲೆಲ್ಲಾ ಆವರಿಸಿಕೊಳ್ಳುವುದು.

**ಇದು ಯೇಸು ತನ್ನ ರಾಜ್ಯದ ಕೆಲಸದಲ್ಲಿ ಮೊದಲ ಬೀಗ ತೆರೆಯುವುದನ್ನು ಸಹ ಸೂಚಿಸುತ್ತದೆ.**

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಪ್ರಕಟನೆ 1:18**

"....ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿ ಅವೆ"

ಹೌದು! ಇದು ಲೋಕದ "ಮರಣದ" ಅಥವಾ "ಬದುಕುತ್ತಾ ಸತ್ತವರಿಗಾಗಿ" **(living dead)** ಇರುವ ಮೊದಲ ಬೀಗದ ಕೈ (**ಲೂಕ** 9:60)

"... **ಸತ್ತವರೇ ತಮ್ಮವರಲ್ಲಿ ಸತ್ತುಹೋದವರ ಉತ್ತರ ಕ್ರಿಯಗಳನ್ನು ಮಾಡಲಿ**"

ಹೌದು! ಇದು ಎರಡನೆಯ ಲೋಕವು ಮುಗಿದ ನಂತರವೂ **ಮರಣದ ಸ್ಥಿತಿಯ ಖಂಡನೆಯಲ್ಲಿ** ಇರುವವರನ್ನು ಪೂರ್ವ ಸ್ಥಿತಿಯ ಜೀವಕ್ಕೆ ತರುವುದನ್ನು ಸೂಚಿಸುತ್ತದೆ. ಇದನ್ನೇ ಇಲ್ಲಿ "ಮರಣ" ಎಂದು ಸೂಚಿಸಲಾಗಿದೆ.

ಇದಾದ ನಂತರ **ಇನ್ನೊಂದು ಕೆಲಸ ಹಿಂಬಾಲಿಸುವುದನ್ನು** ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಯೆಹೆಜ್ಕೇಲ 47:8,9**

"....ಈ ಪ್ರವಾಹವು ಪೂರ್ವ ಪ್ರಾಂತ್ಯಕ್ಕೆ ಹೊರಟು ಅರಾಬಾ ಎಂಬ ತಗ್ಗಿಗೆ ಇಳಿದು ಲವಣ ಸಮುದ್ರದ ಕಡೆಗೆ ಹರಿಯುವುದು; [ದೇವಸ್ಥಾನದಿಂದ] ಹೊರಟ ಪ್ರವಾಹವು ಲವಣ ಸಮುದ್ರಕ್ಕೆ [ಸೇರಲು] ಅದರ ನೀರು ಸಿಹಿಯಾಗುವುದು. ಈ ತೊರೆಯು ಎಲ್ಲೆಲ್ಲಿ ಹರಿಯುತ್ತದೋ ಅಲ್ಲಲ್ಲಿ ಗುಂಪುಗುಂಪಾಗಿ ಚಲಿಸುವ ಸಕಲವಿಧ ಜಲಜಂತುಗಳು ಬದುಕಿ ಬಾಳುವವು; ಮೀನುಗಳು ತಂಡೋಪತಂಡವಾಗಿರುವವು. ಈ ನೀರು ಸಮುದ್ರಕ್ಕೆ ಬೀಳಲು [ಆ ನೀರೂ]

**ಸಿಹಿಯಾಗುವುದು; ಈ ತೊರೆಯು ಎಲ್ಲೆಲ್ಲಿ ಹರಿದರೂ ಅಲ್ಲಲ್ಲಿ ಜೀವವುಂಟಾಗುವುದು"**

ಹೌದು! ಇಲ್ಲಿ ನೀರನ್ನು ಪಡೆಯುವ ಸಮುದ್ರವು ಸಹ ಸಿಹಿಯಾಗುವುದು ಅಂದರೆ ಅದರ ಗುಣ ಹೊಂದುವುದೆಂದು ನೋಡುತ್ತೇವೆ.

ಈ ಜೀವವನ್ನು ಹೊಂದುವ ಸಮುದ್ರವೇ ಮೃತ್ಯು ಸಮುದ್ರವೆಂದು ನೋಡುತ್ತೇವೆ!


ಮತ್ತು ತಂಡೋಪ ತಂಡವಾಗಿರುವ ಮೀನುಗಳು ಮನುಷ್ಯ ಜಾತಿಯನ್ನು ಸೂಚಿಸುತ್ತದೆ.

## ಮತ್ತಾಯ 4:19

**"ನನ್ನ ಹಿಂದೆ ಬನ್ನಿರಿ; ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ನಿಮ್ಮನ್ನು ಮಾಡುವೆನು..."**

ಇದೇ "**ನರಕದ**" ಅಥವಾ ಕುಳಿಯನ್ನು ತೆರೆಯುವ **ಎರಡನೆಯ ಬೀಗದ ಕೈಯಾಗಿದೆ** ಅಥವಾ –

ಕುಳಿಯಿಂದ ಸತ್ತವರನ್ನು ಬದುಕಿಸುವಂತಾಗಿದೆ ಅದ್ದರಿಂದ "**ಸತ್ತವರು ಮತ್ತು ಬದುಕಿರುವವರೆಲ್ಲರೂ**"

 ಜೀವವನ್ನು ಪಡೆದುಕೊಳ್ಳುತ್ತಾರೆ

ಹೌದು!

ಇದೇ ಸತ್ತವರು **ಪುನರುತ್ಥಾನ ಹೊಂದುವ** ಕಾಲವಾಗಿದೆ!

ನಂತರ ನಾವು ಹೀಗೆ ಓದಿ ಓದುತ್ತೇವೆ–

## ಯೆಹೆಜ್ಕೇಲ 47:12

**"ತೊರೆಯ ಎರಡು ದಡಗಳಲ್ಲಿಯೂ ಸಕಲ ಫಲವೃಕ್ಷಗಳು ಬೆಳೆಯುವವು; ಅವುಗಳ ಎಲೆ ಬಾಡದು, ಹಣ್ಣು ತೀರದು; ತೊರೆಯ ನೀರು ಪವಿತ್ರಾಲಯದೊಳಗಿಂದ ಹೊರಟು ಬರುವ ಕಾರಣ ಅವು ತಿಂಗಳು ತಿಂಗಳಲ್ಲಿಯೂ ಹೊಸ ಹೊಸ ಫಲವನ್ನು ಕೊಡುತ್ತಲಿರುವವು; ಅವುಗಳ ಹಣ್ಣು ಆಹಾರಕ್ಕೂ ಸೊಪ್ಪು ಔಷಧಕ್ಕೂ ಅನುಕೂಲಿಸುವವು"**



## ಇಲ್ಲಿ "ವೃಕ್ಷ(ಮರ)ಗಳು" ಮತ್ತು ಎಲೆಗಳು ಏನನ್ನು ಸೂಚಿಸುತ್ತದೆ ?

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಪ್ರಕಟನೆ 22:2**

**"ಆ ನದಿಯ ಉಭಯಪಾರ್ಶ್ವಗಳಲ್ಲಿ ಜೀವವೃಕ್ಷವಿತ್ತು; ಅದು ತಿಂಗಳು ತಿಂಗಳಿಗೆ ಫಲವನ್ನು ಫಲಿಸುತ್ತಾ ಹನ್ನೆರಡು ತರದ ಫಲಗಳನ್ನು ಕೊಡುತ್ತದೆ. ಆ ಮರದ ಎಲೆಗಳು ಜನಾಂಗದವರನ್ನು ವಾಸಿಮಾಡುವದಕ್ಕೆ ಪ್ರಯೋಜನವಾಗಿವೆ."**

**ಇಲ್ಲಿ "ವೃಕ್ಷ(ಮರ)ಗಳು" ಮತ್ತು ಎಲೆಗಳು ಏನನ್ನು ಸೂಚಿಸುತ್ತದೆ ?**

ಸಾಂಕೇತಿಕವಾಗಿ ಉಪಯೋಗಿಸಿರುವ "**ಮರಗಳು**" ಮತ್ತು "**ಹಣ್ಣುಗಳು**" ಮತ್ತು "**ಎಲೆಗಳು**" ನಮ್ಮನ್ನು ಹಿಂದಿನ ಏದೇನ್ ತೋಟಕ್ಕೆ ಕೊಂಡೊಯ್ಯುತ್ತದೆ!

ಅಲ್ಲಿದ್ದ "**ಜೀವ ವೃಕ್ಷ**"ವು **ಶಾಶ್ವತವಾಗಿ** ಬದುಕುವಂತಹ ಅಥವಾ **ನಿತ್ಯಜೀವವನ್ನು** ಸೂಚಿಸುತ್ತದೆ. (**ಆದಿಕಾಂಡ** 3:22 )



## ಈ ಸಂಕೇತ ಅಥವಾ ಸೂಚನೆಗಳ ಅರ್ಥವೇನಿರಬಹುದು?

ಬನ್ನಿ ಮುಂದೆ ನೋಡೋಣ:–

**ಎಲೆಗಳು** ಈ ದಿನಗಳಲ್ಲಿ ಎಲೆಗಳನ್ನು ಔಷಧಿಗಳನ್ನಾಗಿ ಮತ್ತು ರೋಗಗಳನ್ನು ವಾಸಿಮಾಡುವುದಕ್ಕಾಗಿ ಉಪಯೋಗಿಸುತ್ತಾರೆ.

**ಉದಾ:** ಭಾರತದಲ್ಲಿ ಆಯುರ್ವೇದವೆಂಬ ವ್ಯವಸ್ಥೆಯಲ್ಲಿ ಎಲೆಗಳನ್ನು ಮತ್ತು ಗಿಡಮೂಲಿಕೆಗಳನ್ನು ರೋಗ ವಾಸಿಮಾಡುವುದಕ್ಕಾಗಿ ಬಳಸುತ್ತಾರೆ.

ಇಲ್ಲಿ "ಎಲೆಗಳು" **ವಾಸಿಮಾಡುವುದಕ್ಕೆ** ಸಾಂಕೇತಿಕವಾಗಿದೆ. ಯಾವುದೆಂದರೆ –

**ಶಾರೀರಿಕ, ಮಾನಸಿಕ, ಆರ್ಥಿಕ, ಭಾವನಾತ್ಮಕ, ಇತರೆ.**

ಏಕೆಂದರೆ ಮಾನಸಾಂತರ ಹೊಂದುವವರು ನಿಧಾನವಾಗಿ ಪರಿಪೂರ್ಣತೆಗೆ ಎತ್ತಲ್ಪಡಬೇಕಾಗಿದೆ.

**ಈ ವಿಧಾನವನ್ನು ಸತ್ಯವೇದದಲ್ಲಿ "ಸಮಸ್ತವನ್ನು ಸರಿಮಾಡುವುದು" ಎನ್ನಲಾಗಿದೆ.**

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ–



### ಅಪೋಸ್ತಲರ ಕೃತ್ಯಗಳು 3:21

"ಯೇಸು ಅವರಿಗೆ - ನಿಮಗೆ ಸತ್ಯವಾಗಿ ಹೇಳುತ್ತೇನೆ,
ಹೊಸ ಸೃಷ್ಟಿಯಲ್ಲಿ ಮನುಷ್ಯಕುಮಾರನು ತನ್ನ
ಮಹಿಮೆಯ ಸಿಂಹಾಸನದ ಮೇಲೆ ಕೂತುಕೊಳ್ಳುವಾಗ
ನನ್ನನ್ನು ಹಿಂಬಾಲಿಸಿರುವ ನೀವು ಸಹ
ಹನ್ನೆರಡು ಸಿಂಹಾಸನಗಳ ಮೇಲೆ ಕೂತುಕೊಂಡು
ಇಸ್ರಾಯೇಲಿನ ಹನ್ನೆರಡು ಕುಲಗಳಿಗೆ
ನ್ಯಾಯತೀರಿಸುವಿರಿ."

## ಮತ್ತಾಯ 19:28

"ಆದರೆ ಸಮಸ್ತವನ್ನು ಸರಿಮಾಡುವ ಕಾಲವು ಬರುವ ತನಕ ಪರಲೋಕವೇ ಆ ಕ್ರಿಸ್ತನ ಸ್ಥಾನವಾಗಿರಬೇಕು"

ಹೌದು! ಎಲೆಗಳು "ಸಮಸ್ತವನ್ನು ಸರಿಮಾಡುವುದಕ್ಕೂ" ಅಥವಾ "ಪುನರುಜ್ಜೀವನ" ಮಾಡುವುದಕ್ಕೂ ಅಥವಾ ಎಲ್ಲಾ ಮನುಷ್ಯ ಜಾತಿಯನ್ನು ಅಪರಿಪೂರ್ಣತೆಯಿಂದ ಪರಿಪೂರ್ಣತೆಗೆ **ಗುಣಪಡಿಸುವುದಕ್ಕೂ** ಸೂಚನೆಯಾಗಿದೆ.

**ಹಣ್ಣುಗಳು** ಇದು ಜೀವವನ್ನು ನೀಡುವ ಆಹಾರವನ್ನು ಸೂಚಿಸುತ್ತದೆ

ಇಲ್ಲಿ ಇದು **"ಜೀವ" ಕೊಡುವ ಆಹಾರವಾಗಿ** ಸೂಚಿಸಲಾಗಿದೆ ಮತ್ತು ಮುಂದೆ ಇದು ಎಲ್ಲಾ ಮನುಷ್ಯ ಜಾತಿಗೆ ದೊರಕುತ್ತದೆ.

ಹೌದು! ಇದು **ತಿನ್ನುವಂತಹ ಆತ್ಮೀಕ ಆಹಾರ** ಅಥವಾ ದೇವರ ವಾಕ್ಯವೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.


## ಯೆರೇಮೀಯ 15:16

"ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರ ಮಾಡಿಕೊಂಡೆನು"



ಈ ವಾಕ್ಯದ **ಆದೇಶ** ಮತ್ತು **ಪ್ರೋತ್ಸಾಹಗಳನ್ನು** ತಿನ್ನುವುದರಿಂದ ಅಥವಾ **ವಿಧೇಯರಾಗುವುದರಿಂದ** ಜೀವದ ಮಾರ್ಗ ಮತ್ತು ಅದರ ನಿರ್ವಹಣೆಯನ್ನು ಹೊಂದುತ್ತೇವೆ.

## ಆದ್ದರಿಂದ "ನಿತ್ಯಜೀವವನ್ನು" ಹೊಂದುತ್ತೇವೆ!



### ನಿತ್ಯಜೀವವೆಂದರೇನು ?

**ದೇವರು ನಮಗೆ ನಿತ್ಯಜೀವವನ್ನು ಕೊಟ್ಟಿದ್ದಾರೆಯೆ?**

**ಅಥವಾ ದೇವರು ನಮಗೆ ಮುಂದೆ ಕೊಡುತ್ತಾರೆಯೆ?**

ಈ "**ನಿತ್ಯಜೀವನದ**" ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

### 1 ಯೋಹಾನ 5:11

"... ದೇವರು ನಮಗೆ ನಿತ್ಯಜೀವವನ್ನು ಅನುಗ್ರಹಿಸಿದನು, ಆ ಜೀವವು ಆತನ ಮಗನಲ್ಲಿ ಅದೆ ಎಂಬದೇ."

ಹೌದು! ದೇವರು ನಮಗೆ **ಮೊದಲೇ** ನಿತ್ಯಜೀವವನ್ನು ಕೊಟ್ಟಿದ್ದಾರೆ. ಮತ್ತು ಈ ನಿತ್ಯಜೀವವು ಅತನ "**ಮಗನಲ್ಲಿ**" ಅದೆ.

**ಈ ವಾಕ್ಯದ ಅರ್ಥವೇನು?**

**ಈ ಜೀವವನ್ನು ಆತನ ಮಗನಿಂದ ನಾವು ಹೇಗೆ ಪಡೆದುಕೊಳ್ಳುತ್ತೇವೆ?**



ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

### 1 ಯೋಹಾನ 5:12

"ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ"

ದೇವರ "ಮಗನನ್ನು ಅಂಗೀಕರಿಸುವುದು" ಎಂದರೇನು?

ಇದರ ಅರ್ಥವು ಆತನ "ಸ್ವರೂಪವನ್ನು" ಹೊಂದುವುದು – ಮತ್ತು ಈ **ಮಗನ ಸ್ವರೂಪವನ್ನು** ಕುರಿತು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ.

**ಇಬ್ರಿಯರಿಗೆ 1:9**


**"ನೀನು ಧರ್ಮವನ್ನು ಪ್ರೀತಿಸಿದಿ; ಅಧರ್ಮವನ್ನು ದ್ವೇಷಿಸಿದಿ; ಆದುದರಿಂದ ದೇವರು, ನಿನ್ನ ದೇವರೇ, ನಿನ್ನನ್ನು ನಿನ್ನ ಜೊತೆಗಾರರಿಗಿಂತ ಉನ್ನತಸ್ಥಾನಕ್ಕೆ ಏರಿಸಿ ಪರಮಾನಂದ ತೈಲದಿಂದ ಅಭಿಷೇಕಿಸಿದ್ದಾನೆ"**

## ಆದ್ದರಿಂದ "ನಿತ್ಯಜೀವವನ್ನು" ಹೊಂದುತ್ತೇವೆ!

"ಮಗನ ಸ್ವರೂಪದಲ್ಲಿ" ಮತ್ತು ಆತನ ಗುಣಲಕ್ಷಣದಲ್ಲಿ **ಕ್ರಮೇಣವಾಗಿ** ಅಭಿವೃದ್ಧಿ ಹೊಂದುವುದಕ್ಕಾಗಿ ಎಲ್ಲಾ ಮನುಷ್ಯ ಜಾತಿಗೆ ಬೇಕಾದ **ಮಾರ್ಗದರ್ಶನ** ಯಾವುದೆಂದರೆ ದೇವರ **ದೈವೀಕ ಆಜ್ಞೆ** – ಯಾವುದೆಂದರೆ **ಪ್ರೀತಿಯ ಆಜ್ಞೆಯೆಂದು** ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಮಾರ್ಕ 12:30,31**

**"ನಮ್ಮ ದೇವರಾದ ಕರ್ತನು ಒಬ್ಬನೇ ದೇವರು; ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣ ಬುದ್ಧಿಯಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸಬೇಕು ಎಂಬದೇ ಮೊದಲನೆಯ ಆಜ್ಞೆ. ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೇ ಎರಡನೆಯ ಆಜ್ಞೆ"**



ಹೌದು! ವಿಧೇಯತೆಯಿಂದ ತಿಳುವಳಿಕೆ ಮತ್ತು ಬೆಳವಣಿಗೆ ಉಂಟಾಗುತ್ತದೆ ಮತ್ತು ಕೊನೆಯದಾಗಿ

➡ **"ಮಗನ ಸ್ವರೂಪ ಹೊಂದುತ್ತೇವೆ"**

ಕೊನೆಯದಾಗಿ "ಜೀವನದಿ" ಯನ್ನು ಕುರಿತು ಇನ್ನೊಂದು ವಿಷಯವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

## ಯೆಹೆಜ್ಕೇಲ 47:11

**"ಆದರೆ ಅದರ ಸುತ್ತಣ ಜವುಗು ನೆಲವೂ ಸವುಳು ಹೊಂಡಗಳೂ ಸಿಹಿಯಾಗುವುದಿಲ್ಲ"**

**ಇದು ಏನನ್ನು ಸೂಚಿಸುತ್ತದೆ?**

ಇದು ಒಂದು ಜಾತಿಯ ಜನರು ಈ **"ಜೀವನದಿಯನ್ನು" ವಿರೋಧಿಸುವುದನ್ನು** ಸೂಚಿಸುತ್ತದೆ.

ಇವರೇ **ಮನಃಪೂರ್ವಕವಾದ ಅವಿಧೇಯರೆಂದು** ಕೆಳಗಿನ ವಾಕ್ಯದಲ್ಲಿ ಓದುತ್ತೇವೆ. –

## ಯೆಶಾಯ 26:10

**"ದುಷ್ಟರನ್ನು ಕರುಣಿಸಿದರೂ ಅವರು ಧರ್ಮಜ್ಞಾನವನ್ನು ಪಡೆಯರು; ಯೆಹೋವನ ಮಹಿಮೆಯನ್ನು ಲಕ್ಷಿಸದೆ ಯಥಾರ್ಥವಂತರ ದೇಶದಲ್ಲಿಯೂ ಅನ್ಯಾಯವನ್ನಾಚರಿಸುವರು"**

ಹೌದು! ಈ ಜಾತಿಯ ಜನರು **ಮನಃಪೂರ್ವಕವಾದ ಅವಿಧೇಯತೆಯಿಂದ** ದೇವರನ್ನು ಮತ್ತು ಆತನ ನೀತಿಯ ಆಜ್ಞೆಗಳನ್ನು ವಿರೋಧಿಸುವರು ಸೈತಾನ ಮತ್ತು ಬಿದ್ದು ಹೋದ ದೂತರಂತೆ **ದೇವರಿಗೆ ವಿರೋಧಿಗಳಾಗುವರು!!**

ಇವರಿಗೆ "ಮಗನ ಸ್ವರೂಪ" ಇರುವುದಿಲ್ಲ ಆದರೆ ಇನ್ನೊಬ್ಬರ ಸ್ವರೂಪ ಇರುತ್ತದೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

## ಕೀರ್ತನೆ 52:3

**" ಉಪಕಾರಕ್ಕಿಂತಲೂ ಅಪಕಾರವೇ ನಿನಗೆ ಇಷ್ಟ; ನೀತಿಯನ್ನು ಬಿಟ್ಟು ಸುಳ್ಳನ್ನು ಸ್ಥಾಪಿಸುವುದೇ ನಿನಗೆ ಸಂತೋಷ"**

ಹೌದು! ಇದೇ **ಸೈತಾನನ ಮತ್ತು ಆತನೊಂದಿಗೆ ಬಿದ್ದು ಹೋದ ದೂತರ ಸ್ವರೂಪವಾಗಿದೆ!**

**ಹೌದು! ಕೆಲವರು ಆ ಸ್ವರೂಪವನ್ನು ಬೆಳೆಸಿಕೊಳ್ಳುತ್ತಾರೆ ಮತ್ತು ಮಗನ ಸ್ವರೂಪವನ್ನು ಹೊಂದುವುದಿಲ್ಲ.**

ಅವರನ್ನು **"ಉಪ್ಪಿನ ಕಂಬವಾಗುವುದಕ್ಕೆ"** ಅಥವಾ ಎರಡನೆಯ ಮರಣದಲ್ಲಿ ಎಂದೆಂದಿಗೂ **ನಾಶವಾಗುವುದಕ್ಕೆ ಒಪ್ಪಿಸಲಾಗುವುದು** ಎಂಬ ಅರ್ಥ ಬರುವುದನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

**ಆದಿಕಾಂಡ 19:26**

**"ಲೋಟನ ಹೆಂಡತಿ ಅವನ ಹಿಂದೆ ಬರುತ್ತಿರುವಾಗ ಹಿಂದಿರುಗಿ ನೋಡಿದ್ದರಿಂದ ಉಪ್ಪಿನ ಕಂಬವಾದಳು"**

ಲೋಟನ ಹೆಂಡತಿಯು ಪಾಪದ ಮಾರ್ಗದಿಂದ ಹಿಂತಿರಿಗಿ ನೀತಿಯ ಆದೇಶಗಳಿಗೆ ವಿಧೇಯರಾಗಲು ಒಪ್ಪದ **ಮನಃಪೂರ್ವಕವಾದ ಅವಿಧೇಯರಿಗೆ** ಸೂಚನೆಯಾಗಿದ್ದಾಳೆ. ಮತ್ತು **ಅವರು ಜೀವಕ್ಕೆ ಯೋಗ್ಯರಲ್ಲವೆಂದು** ನೋಡುತ್ತೇವೆ. ಮತ್ತು **ಎರಡನೆಯ ಮರಣದಲ್ಲಿ** ನಾಶವಾಗುತ್ತಾರೆಂಬುದಕ್ಕೆ ಉಪ್ಪಿನ ಕಂಬವು ಸೂಚಕವಾಗಿದೆ.

ಹೌದು! ಆದ್ದರಿಂದ ಈ ದಿನ ನಾವು ಮಹತ್ತಾದ ಮತ್ತು ರಹಸ್ಯವಾದ


**ಯೋರ್ದನ್ ನದಿಯ**

ಪಾಠವನ್ನು ಕುರಿತು ಅಭ್ಯಾಸ ಮಾಡಿದೆವು ಮತ್ತು ಮೃತ್ಯು ಸಮುದ್ರಕ್ಕೆ ಜೀವ ಕೊಡುವಂತಹ **"ಜೀವನದಿಯನ್ನು"** ಕುರಿತು ಅಭ್ಯಾಸ ಮಾಡಿದೆವು.

**ಎಲ್ಲಾ ಮಹಿಮೆ ಮತ್ತು ಸ್ತುತಿಯು ದೇವರಿಗೇ ಉಂಟಾಗಲಿ !**



For Private Circulation Only




NOT FOR SALE